ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಸೆಪ್ಟೆಂಬರ್ 2014 ಮಾಸ ಪತ್ರಿಕೆ

ಸಂಪುಟ : 36
ಸಂಚಿಕೆ : 12
ಪುಟ : 16
ಬೆಲೆ : ₹ 5/-



ಬೆಂಗಳೂರು ಉತ್ತರ ಜಿಲ್ಲೆಯ ಗುರುವಂದನಾ ಕಾರ್ಯಕ್ರಮ

ಕೂಜಂತಂ ರಾಮ ರಾಮೇತಿ ಮಧುರಂ ಮಧುರಾಕ್ಷರಂ ।
ಆರುಹ್ಯ ಕವಿತಾ ಶಾಖಾಂ ವಂದೇ ವಾಲ್ಮೀಕಿ ಕೋಕಿಲಂ ॥

ಕಾವ್ಯಶ್ರೀಯ ಕೊಂಬೆಯನ್ನೇರಿ 'ರಾಮರಾಮ' ಎಂಬ ಮಧುರಾಕ್ಷರಗಳನ್ನು ಮಧುರವಾಗಿ ಧ್ವನಿಗೈಯುವ ವಾಲ್ಮೀಕಿ ಕೋಗಿಲೆಯನ್ನು ವಂದಿಸುತ್ತೇನೆ

ರಾಷ್ಟ್ರ ನಿರ್ಮಾಪಕ ಶಿಕ್ಷಕರು 3

ವಿಜ್ಞಾನ ಮತ್ತು ಯಂತ್ರಕಲಾ ಶಾಸ್ತ್ರದಲ್ಲಿ ಭಾರತೀಯ ಸಾಧನೆ 5

8 ಬೆಂಗಳೂರು ದಕ್ಷಿಣ ಜಿಲ್ಲೆ 29ನೇ ಪ್ರತಿಭಾ ಪುರಸ್ಕಾರ ಸಮಾರಂಭ

A Journal of Karnataka State Secondary Teachers' Association

# ಸಂಪಾದಕೀಯ

ಸೆಪ್ಟೆಂಬರ್ 5, 2014ರ ಶಿಕ್ಷಕ ದಿನಾಚರಣೆಯಂದು ಇಡೀ ದೇಶದ ವಿದ್ಯಾರ್ಥಿಗಳ ಜೊತೆ ಏಕಕಾಲದಲ್ಲಿ ಸಂವಾದ ನಡೆಸಿ ರಾಷ್ಟ್ರದಲ್ಲೇ ಮೊದಲ ಬಾರಿಗೆ ಹೊಸ ಇತಿಹಾಸವನ್ನು ಸೃಷ್ಟಿಸಿದ ದೇಶದ ಆದರಣೀಯ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರಿಗೆ ಎಲ್ಲಾ ಶಿಕ್ಷಕ ವೃಂದದ ಪರವಾಗಿ 'ಶಿಕ್ಷಕ ಸಮಾಚಾರ'ದ ಅಭಿನಂದನೆಗಳು. ನಮ್ಮ ಮಕ್ಕಳು ಉತ್ತಮ ಶಿಕ್ಷಕರೂ ಆಗಿ ಬೆಳೆಯಬೇಕು. ಪ್ರತಿಭಾವಂತ ವಿದ್ಯಾರ್ಥಿಗಳು ಶಿಕ್ಷಕ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಬೇಕೆಂದು ಕರೆ ನೀಡುವುದರ ಮೂಲಕ ಮಾನ್ಯ ಪ್ರಧಾನಿಯವರು ಶಿಕ್ಷಕರ ಹಾಗೂ ಶಿಕ್ಷಣದ ಮಹತ್ವವನ್ನು ಅನಾವರಣಗೊಳಿಸಿದ್ದಾರೆ. ಉತ್ತಮ ಶಿಕ್ಷಣ ನೀಡುವ ಮೂಲಕ ದೇಶವನ್ನು ಕಟ್ಟುವ ಪ್ರಯತ್ನಕ್ಕೆ ಶಿಕ್ಷಕರಾದ ನಾವೆಲ್ಲರೂ ಕೈ ಜೋಡಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡೋಣ.

ಶ್ರೀಯುತ ಯಾದವರಾವ್ ಜೀ ಜೋಷಿಯವರು ಸ್ವಾಮಿ ವಿವೇಕಾನಂದರ ಕಲ್ಪನೆಯಂತೆ ಭಾರತಮಾತೆಯನ್ನು ವಿಶ್ವಮಾತೆಯನ್ನಾಗಿಸುವ ಕಾರ್ಯಕ್ಕಾಗಿ ಮನೆ-ಮಠವನ್ನು ತೊರೆದು 1940ರಿಂದ ಸುಮಾರು 50ವರ್ಷಗಳ ಕಾಲ ಕರ್ನಾಟಕವನ್ನು ಕರ್ಮಭೂಮಿಯನ್ನಾಗಿ ಮಾಡಿಕೊಂಡು ಸಾವಿರಾರು ತರುಣರಿಗೆ ರಾಷ್ಟ್ರೀಯ ಸೇವೆಯ ದೀಕ್ಷೆಯನ್ನು ನೀಡಿ ಸಾರ್ಥಕ ಬದುಕನ್ನು ನಡೆಸಿದ ಅಪೂರ್ವ ಪ್ರತಿಭಾನ್ವಿತರು. ಸೆಪ್ಟೆಂಬರ್ 7 ಈ ಮಹನೀಯರ ಜನ್ಮದಿನ. ಇದು ಅವರ ಜನ್ಮ ಶತಮಾನೋತ್ಸವ ವರ್ಷವೂ ಕೂಡ. ಈ ಸಂದರ್ಭದಲ್ಲಿ ಅವರಿಗೆ ನಮ್ಮ ನಮನಗಳು.

ಅಕ್ಟೋಬರ್ 2 ರಂದು ರಾಷ್ಟ್ರಪಿತ ಗಾಂಧೀಜಿ ಹಾಗೂ ಪ್ರಧಾನಮಂತ್ರಿಗಳಾಗಿದ್ದ ಲಾಲ್ ಬಹದ್ದೂರ್ ಶಾಸ್ತ್ರಿಯವರ ಜನ್ಮದಿನ. ಗಾಂಧೀಜಿಯವರ ಕನಸಿನ ಸಮಾಜ 'ಸರ್ವೋದಯ' ಈಗಲಾದರೂ ಸಾಕಾರಗೊಳಿಸುವ ಪ್ರಯತ್ನ ನಡೆಯುತ್ತದೆ ಎಂದು ನಿರೀಕ್ಷಿಸೋಣ. ಲಾಲ್ ಬಹದ್ದೂರರ ಪ್ರಾಮಾಣಿಕತೆ, ಸರಳತೆಯು ಎಲ್ಲರಿಗೂ ಆದರ್ಶವಾಗಿ ದೇಶವನ್ನು ಮುನ್ನಡೆಸುವುದೆಂದು ಆಶಿಸೋಣ.

ಅಕ್ಟೋಬರ್ 16 ಮತ್ತು 17 ವಿಶ್ವ ಆಹಾರ ದಿನ ಹಾಗೂ ಅಂತರರಾಷ್ಟ್ರೀಯ ಬಡತನ ನಿರ್ಮೂಲನಾ ದಿನ. ಬಡತನ ನಿರ್ಮೂಲನೆಯಲ್ಲಿ ಶಿಕ್ಷಣದ ಪಾತ್ರ ಮಹತ್ತರವಾದುದು. ಪ್ರತಿಯೊಬ್ಬ ಪ್ರಜೆಯೂ ವಿದ್ಯಾವಂತನಾದರೆ ಎಲ್ಲಾ ಕ್ಷೇತ್ರಗಳಲ್ಲೂ ಗಣನೀಯ ಸಾಧನೆ ಸಾಧ್ಯ. ಪರಿಣಾಮವಾಗಿ ಆಹಾರದ ಕೊರತೆಯೂ ನೀಗುತ್ತದೆಯಲ್ಲವೇ?

ದೇಶದ ರಕ್ಷಣೆಯಲ್ಲಿ ಮಹತ್ತರ ಪಾತ್ರ ವಹಿಸುತ್ತಿರುವ ನಮ್ಮ ವಾಯುಪಡೆಯ ಸೈನಿಕರಿಗೆ ರಾಷ್ಟ್ರೀಯ ವಾಯುಪಡೆ ದಿನದ ಸಂದರ್ಭದಲ್ಲಿ ಮನದಾಳದ ಶುಭಾಶಯಗಳು.

ಜಮ್ಮು-ಕಾಶ್ಮೀರದ ನೆರೆ ಹಾವಳಿಯಲ್ಲಿ ಕನ್ನಡಿಗರೂ ಸಂತ್ರಸ್ತರು. ಅವರೆಲ್ಲರೂ ಅಪಾರ ನೋವು ಸಂಕಟದಲ್ಲಿದ್ದಾರೆ. ಆ ಎಲ್ಲಾ ಮಿತ್ರರಿಗೆ ಮಾಧ್ಯಮಿಕ ಶಿಕ್ಷಕ ಸಂಘವು ಸಾಂತ್ವನವನ್ನು ಈ ಮೂಲಕ ತಿಳಿಸುತ್ತದೆ. ಅವರ ಸಂಕಷ್ಟಗಳು ಶೀಘ್ರ ಪರಿಹಾರವಾಗಲೆಂದು ದೇವರಲ್ಲಿ ಪ್ರಾರ್ಥಿಸುತ್ತದೆ.

ಸಂಪಾದಕ



"ಹೇ ರಾಜನೇ, ಎಲ್ಲ ಕಾಲದಲ್ಲಿಯೂ ಪ್ರಿಯವಾದುದನ್ನು ಹೇಳುವವನು ದೊರಕುವುದು ಸುಲಭ. ಅಪ್ರಿಯವಾದರೂ ಯುಕ್ತವಾದುದನ್ನು ಹೇಳುವವರೂ ವಿರಳ; ಕೇಳುವವರೂ ವಿರಳ."

— ವಾಲ್ಮೀಕಿ

# ಪರಿವಿಡಿ


- ರಾಷ್ಟ್ರ ನಿರ್ಮಾಪಕ ಶಿಕ್ಷಕರು 3
- ವಿಜ್ಞಾನ ಮತ್ತು ಯಂತ್ರಕಲಾ ಶಾಸ್ತ್ರದಲ್ಲಿ ಭಾರತೀಯ ಸಾಧನೆ 4
- ಸರ್ಕಾರಿ ಶಾಲೆಗೂ ಸುರಕ್ಷಾ ಕ್ರಮ ವಿಸ್ತರಿಸಲು ಆಗ್ರಹ 6
- ಕರ್ನಾಟಕ ಸರ್ಕಾರದ ಸುತ್ತೋಲೆ 7
- ಬೆಂಗಳೂರು ದಕ್ಷಿಣ ಜಿಲ್ಲೆ 29ನೇ ಪ್ರತಿಭಾ ಪುರಸ್ಕಾರ ಸಮಾರಂಭ 8
- ಗುರುವಂದನಾ ದಿನ 9
- ಮೇರುವ್ಯಕ್ತಿ – ಗುರು 9
- ವಿದ್ಯಾರ್ಥಿ ಮಿತ್ರ – 11 10

# ರಾಷ್ಟ್ರ ನಿರ್ಮಾಪಕ ಶಿಕ್ಷಕರು

ಇಂಗ್ಲೀಷ್ ಲೇಖನ – ಡಾ॥. ವೂಡೆ ಪಿ. ಕೃಷ್ಣ
ಅಧ್ಯಕ್ಷರು, ಗಾಂಧೀ ಶಾಂತಿ ಪ್ರತಿಷ್ಠಾನ, ಬೆಂಗಳೂರು ಕೇಂದ್ರ

ಕನ್ನಡಕ್ಕೆ: 'ಶ್ವೇತಾದ್ರಿ'
ಬೆಂಗಳೂರು

ಶಿಕ್ಷಕರ ದಿನಾಚರಣೆಯ ಸಂದರ್ಭದಲ್ಲಿ ಸೂಕ್ತವಾದ ಈ ಒಂದು ಸುಂದರ ಹೇಳಿಕೆಯನ್ನು ನಾನು ಗಮನಿಸಿದೆ: "ಜಗತ್ತಿನಾದ್ಯಂತ ಮಕ್ಕಳು ಶಾಲೆಗೆ ನಡೆದು ಹೋಗುತ್ತಾರೆ ಮತ್ತು ಮನೆಗೆ ಓಡುತ್ತಾ ಬರುತ್ತಾರೆ" ಈ ಮನೋಭಾವವನ್ನು ಬದಲಿಸುವ ಹೊಣೆ ಎಲ್ಲಾ ಶಿಕ್ಷಕರದು ಎಂಬುದು ನನ್ನ ಭಾವನೆ.

ಸ್ವಾಮಿ ವಿವೇಕಾನಂದರು ಮಾನವಕುಲದ ಗುರಿಯೇ ಜ್ಞಾನ ಎಂದು ಹೇಳಿದ್ದಾರೆ. ನಾವು ನಮ್ಮ ವಿದ್ಯಾರ್ಥಿಗಳಿಗೆ ಪೂರ್ಣಜ್ಞಾನವನ್ನು ನೀಡುವುದರ ಬದಲು ಅಗತ್ಯ ಹಾಗೂ ಅನಗತ್ಯವಾದ ವಿಚಾರಗಳನ್ನು ಅವರಿಗೆ ತುಂಬುವ ಮೂಲಕ ಅವರನ್ನು ಅರೆ ಶಿಕ್ಷಿತರನ್ನಾಗಿಸುತ್ತಿದ್ದೇವೆ. ಸ್ವಾಮೀಜಿಯವರ ಪ್ರಕಾರ ಆಧ್ಯಾತ್ಮಿಕ ಹಾಗೂ ಪ್ರಾಪಂಚಿಕ ಶಿಕ್ಷಣಗಳೆರಡನ್ನೂ ನೀಡಿದಾಗಲೇ ಶಿಕ್ಷಣ ಪರಿಪೂರ್ಣವಾಗುವುದು. ಆಧ್ಯಾತ್ಮಿಕ ಶಿಕ್ಷಣದ ಮೂಲಕ ವ್ಯಕ್ತಿತ್ವ ವಿಕಸನ ಮತ್ತು ಪ್ರಾಪಂಚಿಕ ಶಿಕ್ಷಣದ ಮೂಲಕ ನಮ್ಮ ಜೀವನೋಪಾಯ ರೂಪಿಸಿಕೊಳ್ಳಬೇಕೆಂಬುದು ನಮ್ಮ ಆಶಯ. ಸ್ವಾಮೀಜಿಯವರು ಸರಿಯಾಗಿಯೇ ನೈತಿಕ ಮತ್ತು ಬೌದ್ಧಿಕ ವ್ಯಕ್ತಿತ್ವದ ಸಂಪೂರ್ಣ ವಿಕಾಸಕ್ಕೆ ಒತ್ತು ನೀಡಿದ್ದಾರೆ. ಅವರ ಪ್ರಕಾರ ನೀತಿವಂತ ವ್ಯಕ್ತಿಯ ಆಂತರ್ಯದ ಸತ್ಯವೇ ಸದಾಚಾರ. ದುರದೃಷ್ಟವಶಾತ್ ನಮ್ಮ ಈಗಿನ ವಿದ್ಯಾಭ್ಯಾಸ ಪದ್ಧತಿಯು ಹಣ ಗಳಿಕೆಯ ಯಂತ್ರಗಳನ್ನು ಮಾತ್ರ ನಿರ್ಮಿಸುತ್ತಿದೆಯೇ ಹೊರತು ಪರಿಪೂರ್ಣ ವ್ಯಕ್ತಿಗಳನ್ನಲ್ಲ ಎಂದೆನಿಸುತ್ತದೆ.

ಪ್ರಾಚೀನ ಶಿಕ್ಷಣದ ಆಶಯವು ಪಾರಂಪರಿಕವಾಗಿ ರೂಪುಗೊಂಡ ವಿಚಾರ ಮತ್ತು ನಡತೆಗಳಿಗನುಗುಣವಾಗಿ ಜೀವನದ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸುವ ಶಿಕ್ಷಣವನ್ನು ನೀಡುವುದಾಗಿದ್ದರೆ ಈಗಿನ ದೃಷ್ಟಿಯು ಹಳೆತು ಮತ್ತು ಹೊಸದನ್ನು ಹಸ್ತಗತ ಮಾಡಿಕೊಂಡು ಹೊಸ ಆಲೋಚನಾ ವಿಧಾನ ಮತ್ತು ಜೀವನದ ಹರಿಕಾರರನ್ನಾಗಿಸುವುದಾಗಿದೆ. ಆದ್ದರಿಂದ ಒಳ್ಳೆಯ ಹಾಗೂ ಶ್ರೇಷ್ಠ ಶಾಲೆಗಳು ಮತ್ತು ಒಳ್ಳೆಯ ಮತ್ತು ಶ್ರೇಷ್ಠ ಶಿಕ್ಷಕರ ಅಗತ್ಯತೆಯನ್ನು ಒತ್ತಿ ಹೇಳಬೇಕಾಗಿಲ್ಲ. ಆದರ್ಶ ಶಿಕ್ಷಕರ ಗುಣಗಳಿಗಿಂತ ಹೆಚ್ಚಾಗಿ ಪ್ರಕಾಶಿಸುತ್ತಿರುವ ಡಾ॥ ರಾಧಾಕೃಷ್ಣನ್‌ರಂತಹ ಆದರ್ಶ ಉದಾಹರಣೆಗಳು ನಮ್ಮ ಮುಂದಿದೆ. ಆದರ್ಶ ಶಿಕ್ಷಕರು ಜ್ಞಾನ ಹಾಗೂ ತನ್ನ ವಿದ್ಯಾರ್ಥಿಯನ್ನು ಪ್ರೀತಿಸುತ್ತಾರೆ. ಹಾಗೂ ಶಿಕ್ಷಕ ವೃತ್ತಿಯ ಬಗ್ಗೆ ಅಪಾರ ಒಲವನ್ನು ಹೊಂದಿರುತ್ತಾರೆ.


ರಾಮಕೃಷ್ಣ ಮಠದ ಹಿರಿಯ ಸನ್ಯಾಸಿಗಳಾದ ಸ್ವಾಮಿ ರಂಗನಾಥಾನಂದರು ಯುಕ್ತವಾಗಿ ಹೀಗೆ ಹೇಳಿದ್ದಾರೆ: "ಶಿಕ್ಷಕನ ಖಾಸಗೀ ಬದುಕೂ ಸಾರ್ವಜನಿಕ ಮಹತ್ವದ್ದಾಗಿರುತ್ತದೆ." ಎಂದರೆ ಶಿಕ್ಷಕ ಸಂಬಳಕ್ಕಾಗಿಯೇ ದುಡಿಯುವವನಲ್ಲ ಮತ್ತು ತನ್ನ ಖಾಸಗಿ ಮತ್ತು ವೃತ್ತಿ ಜೀವನದ ನಡುವೆ ಅಂತರ ಹೊಂದಿರಲಾಗದು. ಭಾರತದಲ್ಲಿ ಶಿಕ್ಷಕರನ್ನು ಗೌರವಿಸಿ ಪೂಜಿಸುವಂತೆ ಜಗತ್ತಿನಲ್ಲಿ ಬೇರೆಲ್ಲೂ ಕಾಣುವುದಿಲ್ಲ.

ಸಹಕಾರಾತ್ಮಕ ಸಾಧನೆ ಮಾಡಲು ಅನುಕೂಲಕರವಾದ ವಾತಾವರಣವನ್ನು ಶಾಲೆಗಳು ನಿರ್ಮಿಸುವುದರಿಂದ ಶಾಲಾ ಕಾಲೇಜುಗಳಲ್ಲಿ ಶಿಕ್ಷಕರ ಪಾತ್ರ ಸರ್ವೋತ್ಕೃಷ್ಟ ಮಹತ್ವದ್ದಾಗಿರುತ್ತದೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಉದಾತ್ತ ಸನ್ನಡತೆಯ ವ್ಯಕ್ತಿತ್ವದ ಬುದ್ಧ, ಜೀಸಸ್, ಗಾಂಧಿ ಮತ್ತು ವಿವೇಕಾನಂದರ ವಿಚಾರಗಳನ್ನು ತೆರೆದಿಡಬೇಕು. ವಿದ್ಯಾಥಿಗಳ ಸದಾಚಾರದ ಸತ್ವವನ್ನು ಹೆಚ್ಚಿಸುವಂತಹ ಶೈಕ್ಷಣಿಕ ಕಾರ್ಯಕ್ರಮಗಳು, ಸಮಾಜ ಸೇವೆಯಂತಹ ಕಾರ್ಯಕ್ರಮಗಳನ್ನು ಹೆಣೆಯುವುದರ ಮೂಲಕ ಅವರನ್ನು ಸಮಾಜಕ್ಕೆ ಫಲದಾಯಕರನ್ನಾಗಿಸಲು ಪ್ರಯತ್ನಿಸ ಬಹುದು. ಶಿಕ್ಷಕರು ನಿಜವಾಗಿಯೂ ರಾಷ್ಟ್ರ ನಿರ್ಮಾಕರೇ.

ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ ಶಿಕ್ಷಕರ ಗುಣಮಟ್ಟದ ಬಗ್ಗೆ ಅದರ ಅಧ್ಯಕ್ಷರು ಹೀಗೆ ಹೇಳುತ್ತಾರೆ: 'ನಮ್ಮ ಶಿಕ್ಷಕರಿಗೆ ಉಸ್ತುವಾರಿಯ ಅವಶ್ಯಕತೆಯಿಲ್ಲ.' ಈ ಮಾತು ಅಲ್ಲಿನ ಶಿಕ್ಷಕರ ಸಮರ್ಪಣಾ ಭಾವ, ಒಲವು, ನಡತೆ ಹಾಗೂ ಸಕಾರಾತ್ಮಕ ಮನೋಭಾವವನ್ನು ತಿಳಿಸುತ್ತದೆ. ಶಿಕ್ಷಕರು ಕೇವಲ ಬೋಧಿಸದೆ ವಿದ್ಯಾರ್ಥಿಗಳನ್ನು ಪ್ರಕಾಶಗೊಳಿಸುತ್ತಾರೆ. ಈ ದೃಷ್ಟಿಯಲ್ಲಿ ಅವರು ಶ್ರೇಷ್ಠ ಪರಿವರ್ತಕರು. ಪ್ರಖ್ಯಾತ ನ್ಯಾಯವಾದಿ ನಾನಿ ಫಾಲ್ಕಿವಾಲಾರವರ ಈ ಮಾತುಗಳನ್ನು ನೆನಪಿಸಿಕೊಳ್ಳುತ್ತೇನೆ: 'ಪ್ರಖರ ನಾಗರಿಕರನ್ನು ಕಾರ್ಖಾನೆಗಳಲ್ಲಿ ತಯಾರಿಸ ಲಾಗುವುದಿಲ್ಲ, ಶಿಕ್ಷಣದ ಮೂಲಕವೇ ಬರಬೇಕು'.

ಮಾನವ ಕುಲ ಹತ್ತೊಂಭತ್ತು ಮತ್ತು ಇಪ್ಪತ್ತನೆ ಶತಮಾನಗಳಲ್ಲಿ ಕೆಲವು ಮುಖ್ಯ ಮೌಲ್ಯಗಳನ್ನು ಕಂಡಿತು. ಇಂಗ್ಲೆಂಡಿನಿಂದ ಪ್ರಜಾಪ್ರಭುತ್ವ ಮೌಲ್ಯ ಜನ್ಮ ತಾಳಿತು. ಮೌಲ್ಯಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳು ಫ್ರಾನ್ಸ್‌ನಿಂದ ಜನಿತವಾಯಿತು. ಚಿರಂತನ ಮೌಲ್ಯಗಳಾದ ಅಹಿಂಸೆ ಮತ್ತು ಸತ್ಯಾಗ್ರಹಗಳು ಭಾರತದ್ದಾದರೆ ವೈಜ್ಞಾನಿಕ ಮನೋಭಾವವು ವಿಜ್ಞಾನದ್ದಾಗಿದೆ. ನಮ್ಮ ಯುವ ಪೀಳಿಗೆಯವರಲ್ಲಿ ನಾವು ಉಜ್ವಲ ಭವಿಷ್ಯವನ್ನು ಕಾಣಬೇಕಾದರೆ ತರಗತಿಯ ಬೋಧನೆಯೊಂದಿಗೆ ಈ

ಪುಟ 7 ಕ್ಕೆ ➤



# ವಿಜ್ಞಾನ ಮತ್ತು ಯಂತ್ರಕಲಾ ಶಾಸ್ತ್ರದಲ್ಲಿ ಭಾರತೀಯ ಸಾಧನೆ

ಪ್ರೊ|| ಎಸ್. ವಿ. ಸುಬ್ರಹ್ಮಣ್ಯಂ
ನಿವೃತ್ತ ಪ್ರಾಧ್ಯಾಪಕರು
ಭಾರತೀಯ ವಿಜ್ಞಾನ ಸಂಸ್ಥೆ

ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ವಿಜ್ಞಾನ ಮತ್ತು ಯಂತ್ರಕಲಾಶಾಸ್ತ್ರಗಳ ಸಂಶೋಧನೆ ಮತ್ತು ಬೆಳವಣಿಗೆಯಲ್ಲಿ ಐದು ಯೋಜನೆಗಳನ್ನು ಹಾಕಿಕೊಂಡಿದೆ.

**1. ಸಿ.ಎಸ್.ಐ.ಆರ್** (ಕೇಂದ್ರೀಯ ವೈಜ್ಞಾನಿಕ ಮತ್ತು ತಾಂತ್ರಿಕ ಸಂಶೋಧನಾ ಸಂಸ್ಥೆಗಳು). 6000ಕ್ಕೂ ಹೆಚ್ಚಿನ ವಿಜ್ಞಾನಿಗಳು ಮತ್ತು ತಾಂತ್ರಿಕ ನೈಪುಣ್ಯತೆ ಹೊಂದಿರುವ 40 ಪ್ರಯೋಗಾಲಯಗಳು ಅಸ್ಥಿತ್ವಕ್ಕೆ ಬಂದಿದೆ.

2. **ಡಿ.ಆರ್.ಡಿ.ಓ** (ರಕ್ಷಣೆ ಮತ್ತು ಸಂಶೋಧನೆಯ ಬೆಳವಣಿಗೆಯನ್ನು ಬಿಂಬಿಸುವ ಸಂಸ್ಥೆ.)

**3. ಅಣುಶಕ್ತಿಯ ಸಂಶೋಧನೆ ಮತ್ತು ಬೆಳವಣಿಗೆಯ ಸಂಸ್ಥೆ:** ಇದು ಪ್ರಬಲ ಸಂತಾನೋತ್ಪತ್ತಿಯ ಅಣುಸ್ಥಾವರಗಳನ್ನು ವಿನ್ಯಾಸಗೊಳಿಸುವ ಪೂರ್ಣಿಮ–2 (ಶಾಂತಿಗಾಗಿ ಅಣು), ಅಪ್ಸರ (ಸಂಶೋಧನೆಗಾಗಿ).

**ಅಣುಶಕ್ತಿಯ ಸ್ಫೋಟ:** ಮೊಟ್ಟಮೊದಲ ಅಣುಸ್ಫೋಟ ಪ್ರಯೋಗ ಭಾರತದ ಪೊಕಾರನ್ (ರಾಜಸ್ಥಾನ) 1974 ರ ಮೇ 6ರಲ್ಲಿ ನಡೆಯಿತು. ಈ ಪ್ರಯೋಗ ಮಾಡಿದ ರಾಷ್ಟ್ರಗಳಲ್ಲಿ ಭಾರತ 6ನೆಯದು. ವಿಜ್ಞಾನಿ ರಾಜಾರಾಮಣ್ಣ ಅವರ ನೇತೃತ್ವದಲ್ಲಿ ನಡೆಯಿತು. ಎರಡನೆಯ ಅಣುಸ್ಫೋಟ ಪ್ರಯೋಗ ಪೊಕಾರನ್–3, 1998 ರ ಮೇ 11 ಮತ್ತು 13. ಈ ಎಲ್ಲಾ ಪರೀಕ್ಷೆಗಳು ಸ್ವದೇಶಿ ತಂತ್ರಜ್ಞಾನ ಮೂಲಕ ಅತ್ಯಂತ ಗೋಪ್ಯತೆಯಲ್ಲಿ ಡಾ|| ಎ ಪಿ ಜಿ ಅಬ್ದುಲ್ ಕಲಾಂ ಅವರ ನೇತೃತ್ವದಲ್ಲಿ ನಡೆಯಿತು. ಅಮೇರಿಕಾವು 1032 ಪ್ರಯೋಗಗಳಲ್ಲಿ ಪಡೆದ ಫಲಿತಾಂಶವನ್ನು ಭಾರತ 3 ಪ್ರಯೋಗಗಳಲ್ಲಿ ಸಾಧಿಸಿತ್ತು.

**4. ಅಂತರಿಕ್ಷಾ ನೌಕೆಗಳಲ್ಲಿ ಸಂಶೋಧನಾ ಕಾರ್ಯಕ್ರಮ:** 1970–80 ವರೆಗೆ ಉಪಗ್ರಹಗಳಾದ ಆರ್ಯಭಟ, ಭಾಸ್ಕರಗಳನ್ನು ಉಡಾಯಿಸಲಾಯಿತು. 80–90 ರ ವರೆಗೆ ರೋಹಿಣಿ ಐ ಆರ್ ಎಸ್ ಶ್ರೇಣಿ ಉಪಗ್ರಹಗಳನ್ನು, 1990 – 2000 ರ ವರೆಗೆ ಇನ್ಸಾಟ್ ಶ್ರೇಣಿ ಉಪಗ್ರಹಗಳಲ್ಲಿ ಭಾರತ 23 ಉಪಗ್ರಹಗಳನ್ನು ಉಡಾಯಿಸಿತು. ಉಪಗ್ರಹ ಉಡಾವಣೆ ಕ್ಷಿಪಣಿಗಳು (ಎಲ್ಲಾ ಸ್ವದೇಶಿ ನಿರ್ಮಿತ) : (ಉಪಗ್ರಹ ಉಡಾವಣೆ ಸಾಧನೆ) ಎಸ್.ಎಲ್.ವಿ. – 3 ಎ.ಎಸ್.ಎಲ್.ವಿ (ವಿಶಿಷ್ಠ ಎಸ್.ಎಲ್.ವಿ) ಪಿ.ಎಸ್.ಎಲ್.ವಿ (ಅಂಡಾಕೃತಿ ಕಕ್ಷೆಯ ಎಸ್.ಎಲ್.ವಿ) ಜಿ.ಎಸ್.ಎಲ್.ವಿ (ಭೂಸ್ಥಿರ ಕಕ್ಷೆಯ ಎಸ್.ಎಲ್.ವಿ. ಇದು ಅತಿ ಶೈತ್ಯದ್ರವದ ಯಂತ್ರವನ್ನು ಒಳಗೊಂಡಿರುತ್ತದೆ). ಈ ಕ್ಷಿಪಣಿಯಿಂದ ಉಡಾವಣೆ ಮಾಡಿದಾಗ ಉಡ್ಡಯನ ವೇಗ ಪ್ರತಿ ಘಂಟೆಗೆ 27000 ಕಿ.ಮಿ. ಗಿಂತ ಹೆಚ್ಚಾಗಿರುತ್ತದೆ. ಇಂಟೆಲ್ ಸಾಟ್ ಸಂಸ್ಥೆ ನಮ್ಮ ಇನ್‌ಸಾಟ್ 2ಇ ಉಪಗ್ರಹದ ಕೆಲ ಸೂತ್ರಗಳನ್ನು ಕೊಂಡುಕೊಂಡಾಗ ನಮ್ಮ ದೇಶಕ್ಕೆ ಇದರಿಂದ ಸಾವಿರಾರು ಕೋಟಿ ಆದಾಯ ಬಂದಿತು. ಕ್ಷಿಪಣಿ ಉಡಾವಣೆಯಲ್ಲಿ ನಮ್ಮ ರಾಷ್ಟ್ರ ಜಗತ್ತಿನ ರಾಷ್ಟ್ರಗಳಲ್ಲಿ ಆರನೆಯ ಸ್ಥಾನಹೊಂದಿದೆ.

ಭಾರತವು ನವೆಂಬರ್ 2008ರಲ್ಲಿ ಚಂದ್ರಯಾನ–1 ಉಪಗ್ರಹವನ್ನು ಉಡಾವಣೆ ಮಾಡಿ ಚಂದ್ರನ ಮೇಲ್ಮೈಯನ್ನು ಪರೀಕ್ಷಿಸುವ ನಾಲ್ಕನೇ ರಾಷ್ಟ್ರವಾಯಿತು. ಸೆಪ್ಟೆಂಬರ್ 2012ರಲ್ಲಿ 100ನೇ ಅಂತರಿಕ್ಷ ನೌಕೆಯನ್ನು ಉಡಾವಣೆ ಮಾಡಿದ ರಾಷ್ಟ್ರವಾಯಿತು. ನಮ್ಮ ದೇಶದ ಅತೀ ನಂಬಿಕೆಯನ್ನು ಹೊಂದಿರುವ ಪಿ.ಎಸ್.ಎಲ್.ವಿ ಯಿಂದ ಫ್ರಾನ್ಸ್ ದೇಶದ ಸ್ಪಾಟ್–6 ಮತ್ತು ಜಪಾನಿನ PROITERES ಉಪಗ್ರಹವನ್ನು ಯಶಸ್ವಿಯಾಗಿ ಉಡಾವಣೆ ಮಾಡಿ ನಿರ್ದಿಷ್ಟ ಕಕ್ಷೆಗಳಲ್ಲಿ ಚಲಿಸಲು ಸಾಧ್ಯವಾಯಿತು.

ಪುಟ 5 ಕ್ಕೆ ➢

➢ ಪುಟ 4 ರಿಂದ..... **ಭಾರತೀಯರ ಸಾಧನೆ**

ಮಂಗಳಯಾನ ಅಥವ ಮಂಗಳ ಗ್ರಹದ ಉಪಗ್ರಹವಾದ MOM ಮಂಗಳಗ್ರಹದ ಕಕ್ಷೆಯಲ್ಲಿರುವ ಉಪಗ್ರಹವಾಗಿ 2013 ರ ನವೆಂಬರ್‌ನಲ್ಲಿ ಉಡಾವಣೆಯಾಗಿ, ಮಂಗಳಗ್ರಹವನ್ನು 2014 ರಲ್ಲಿ ತಲುಪುವ ನಿರೀಕ್ಷೆ ಇದೆ. ಈ ಉಪಗ್ರಹ 1337 ಕಿಲೋಗ್ರಾಂ ತೂಕ ಹೊಂದಿದ್ದು ಐದು ಉಪಕರಣಗಳನ್ನು ಹೊಂದಿದೆ. ಇವು ಮಂಗಳದ ವಾತಾವರಣ, ಪ್ರತಿರೂಪ ಚಿತ್ರಗಳನ್ನು ಪಡೆದು ಮಂಗಳಗ್ರಹದ ಅನ್ವೇಷಣೆಯಲ್ಲಿ ಮುಖ್ಯ ಪಾತ್ರವಹಿಸಿ ಮುಂದಿನ ಉಪಗ್ರಹಗಳ ವಿನ್ಯಾಸದಲ್ಲಿ ಮುಖ್ಯ ಪಾತ್ರವಹಿಸುತ್ತದೆ.

**5. ಭಾರತೀಯ ವೈದ್ಯಕೀಯ ಸಂಶೋಧನಾ ಸಂಸ್ಥೆ:**

**ವ್ಯವಸಾಯ:** ಹಸಿರು ಕ್ರಾಂತಿಯಿಂದ ಸ್ವಾಯುತ್ತತೆಯನ್ನು ಪಡೆಯಲು ಪ್ರೊ॥ ಸ್ವಾಮಿನಾಥನ್‌ರವರ ನೇತೃತ್ವದಲ್ಲಿ ಕಾರ್ಯಗಳನ್ನು ರೂಪಿಸಿಕೊಂಡಿದೆ.

**ಶ್ವೇತ ಕ್ರಾಂತಿ:** ಪ್ರಪಂಚದಲ್ಲಿ ಅತಿಹೆಚ್ಚಿನ ಹಾಲು ಉತ್ಪಾದನೆ ಮಾಡುವ ರಾಷ್ಟ್ರವಾಗಿದೆ.

**ಜಲಪ್ರಳಯ ಯೋಜನೆ:** ರಾಷ್ಟ್ರೀಯ ಕ್ಷೀರ ಉತ್ಪಾದನೆಯ ಕಾರ್ಯಕ್ರಮಗಳಲ್ಲಿ ಪ್ರಮುಖವಾಗಿದೆ. ಪ್ರಪಂಚದ ಅತಿ ಹೆಚ್ಚಿನ ಕ್ಷೀರ ಉತ್ಪಾದನೆ ಕೇಂದ್ರವಾಗಿ 1998 ರಲ್ಲಿ ಅಮೇರಿಕಾಗಿಂತ ಹೆಚ್ಚಿನ ಹಾಲು ಉತ್ಪಾದನೆಯ ಕೇಂದ್ರವಾಗಿದೆ. ಜಗತ್ತಿನ ಪ್ರತಿಶತ 17 ರಷ್ಟು ಕ್ಷೀರ ಉತ್ಪಾದನೆ ನಮ್ಮ ರಾಷ್ಟ್ರದಲ್ಲಿ ಆಗುತ್ತಿದೆ. ಕಳೆದ 30 ವರ್ಷಗಳಲ್ಲಿ ಇದರಿಂದ ಪ್ರತಿಯೊಬ್ಬನಿಗೆ ದೊರಕುವ ಹಾಲು ದ್ವಿಗುಣಗೊಂಡಿದೆ. ಹಾಲಿನ ಡೈರಿಗಳ ಕಾರ್ಯವು ನಮ್ಮ ರಾಷ್ಟ್ರದ ಅತಿ ಶ್ರೇಷ್ಠಮಟ್ಟದ ಸ್ವಾಯುತ್ತೆಯ ಕಾರ್ಯಕ್ರಮವಾಗಿ, ಗ್ರಾಮ ಪ್ರದೇಶದಲ್ಲಿ ಅತಿ ಹೆಚ್ಚಿನ ಉದ್ಯೋಗ ಸೃಷ್ಟಿಯಾಗಿದೆ. ಹೆಚ್ಚಿನ ಹಾಲಿನ ಉತ್ಪಾದನೆಯ ಜೊತೆಗೆ ಗ್ರಾಮದ ಜನತೆಗೆ ಹೆಚ್ಚಿನ ಉದ್ಯೋಗ ಸೃಷ್ಟಿಯಾಗಿದೆ.

**ಕ್ಷಿಪಣಿ:** (ಎಲ್ಲಾ ಸ್ವದೇಶಿ) 1. **ನಾಗ್** ಇದು ಮೂರನೇ ಸಂತತಿಯ ಮಿಲಿಟರಿ ಟ್ಯಾಂಕ್‌ನಿಂದ ರಕ್ಷಣೆ ಪಡೆಯುವ ಸಾಧನ, ಮುನ್ನುಗ್ಗಿ ಆಕ್ರಮಣ ಮಾಡುವ ಮತ್ತು 4 ಕಿ.ಮಿ ದೂರದಲ್ಲಿ ಹೊಡೆದು – ಮರೆಯುವ ಸಾಧ್ಯತೆ ಹೊಂದಿರುವ ಕ್ಷಿಪಣಿ. ಇದು ನಿಖರವಾಗಿ ಕೆಲಸ ಮಾಡುವುದಕ್ಕೆ ಉಪಯೋಗಿಸುವ ಪ್ರಾಯೋಜಕರಿಂದ ಮಾಹಿತಿ ಪಡೆಯುವರು. ಇದು ಉತ್ಪಾದನೆಯ ಮಟ್ಟ ತಲುಪಿದೆ.

**2. ಹೆಲಿನಾ:** 3ನೆಯ ಸಂತತಿಯ ಮಿಲಿಟರಿ ಟ್ಯಾಂಕ್ ಭಕ್ಷಕವಾಗಿ 7 ಕಿ. ಮಿ. ಗಿಂತ ಹೆಚ್ಚಿನ ದೂರದ ಕಾರ್ಯ ನಿರ್ವಹಿಸುವ ಸಾಮರ್ಥ್ಯ ಹೊಂದಿದೆ. ಹಿಂದೂಸ್ಥಾನ್ ಏರೊನಾಟಿಕ್ಸ್ ಲಿಮಿಟೆಡ್ (HAL) ಇದನ್ನು ವಿನ್ಯಾಸಗೊಳಿಸಿ ಉತ್ಪಾದನಾ ಮಟ್ಟ ತಲುಪಿದೆ.

3. **ಅಸ್ತ್ರ:** ದೃಶ್ಯ ದೂರಕಿಂತ ಹೆಚ್ಚಿನ ದೂರದಲ್ಲಿ ಕೆಲಸ ಮಾಡುವ, ಗಾಳಿಯಿಂದ ಗಾಳಿಗೆ (ಗಾಳಿ ಮಾಧ್ಯಮದ) ಕ್ಷಿಪಣಿ. ಇದು ಭಾರತದ ಹಗುರ ಯುದ್ಧ ಕ್ರಿಯಾ ವೈಮಾನಿಕ ಯಂತ್ರವಾಗಿ ಹೊರಹೊಮ್ಮಿದೆ. ಇವುಗಳ ತಯಾರಿಕೆ ಜುಲೈ 2010 ರಿಂದ ಆಗುತ್ತಿದೆ.

4. **LR- SAM:** (LONG RANGE- SURFACE TO AIR MISSILE) ಹೆಚ್ಚಿನ ದೂರದ ಮೇಲ್ಮೈಯಿಂದ ಗಾಳಿಯಲ್ಲಿ ಚಲಿಸುವ ಕ್ಷಿಪಣಿ. ಇದು ಡಿ.ಆರ್.ಡಿ.ಓ. ಮತ್ತು ಇಸ್ರೇಲ್‌ನ ಐ.ಎ.ಐ.ನ ಜಂಟಿ ಸಂಸ್ಥೆ ಕೂಡಿ ಸಿದ್ಧಪಡಿಸುತ್ತಿರುವ ಕ್ಷಿಪಣಿಯಾಗಿ ಮೇ 2010ರಲ್ಲಿ ರೂಪಗೊಂಡು ಕೆಲವು ಪರೀಕ್ಷಾರ್ಥ ಉಡಾವಣೆ ಆಗಿದೆ.

5. **MR-SAM** (MEDIUM RANGE SURFACE AIR MISSILE) ಇದು ಮಧ್ಯಮ ದೂರದ ಮೇಲ್ಮೈನಿಂದ ಗಾಳಿಯಲ್ಲಿ ಚಲಿಸುವ ಕ್ಷಿಪಣಿ. ಇದು (DRDO) ಡಿ.ಆರ್.ಡಿ.ಓ ಮತ್ತು ಇಸ್ರೇಲ್‌ನ (I A I) ಐ.ಎ.ಐ. ಯ ಜಂಟಿ ಕಾರ್ಯಕ್ರಮ. ಗ್ರಾಹಕರಿಗೆ ಬೇಕಾದ ವಿಚಾರಗಳನ್ನು ಸಿದ್ಧ ಪಡಿಸಲಾಗಿದೆ.

6. **ಅಗ್ನಿ ಸರಣಿಯ–** (ಮೇಲ್ಮೈನಿಂದ ಮೇಲ್ಮೈನ ಕ್ಷಿಪಣಿಗಳು) :– ಅಗ್ನಿ–1 ಸಾಮರ್ಥ್ಯ ದೂರ 700 ಕಿ.ಮಿ, ಅಗ್ನಿ–2 ರ ಸಾಮರ್ಥ್ಯ–2000 ಕಿ.ಮಿ ಗಿಂತ ಹೆಚ್ಚು. ಇವುಗಳನ್ನು ಅಭಿವೃದ್ಧಿಪಡಿಸಿ ಕಾರ್ಯದಲ್ಲಿ ನಿಯುಕ್ತಿಗೊಳಿಸಲಾಗಿದೆ. ಅಗ್ನಿ–3, ಸಾಮರ್ಥ್ಯ 3000 ಕಿ.ಮೀ. ಇದು ಕಾರ್ಯಾಚರಣೆಯಲ್ಲಿ ನಿಯುಕ್ತಿಗೊಳ್ಳಲು ಸಿದ್ಧವಾಗಿದೆ.

7. **BrahMos-** ಇದು ಶಬ್ದವೇಗಕ್ಕಿಂತ ಹೆಚ್ಚಿನ ವೇಗದ ಕ್ಷಿಪಣಿ. ಸಮುದ್ರದಲ್ಲಿ ನೆಲದ ಮೇಲೆ, ಚಲಿಸುವ ಸಾಮರ್ಥ್ಯ ಹೊಂದಿದೆ. ಹಡಗುಗಳಲ್ಲಿ, ಜಲಾಂತರ್‌ಗಾಮಿಗಳಲ್ಲಿ, ವಿಮಾನಗಳಲ್ಲಿ ಮತ್ತು ಚಲಿಸುವ ಭೂ ಮೇಲ್ಮೈಗಳಲ್ಲಿ ಇದನ್ನು ಅಳವಡಿಸಬಹುದು. ಇವುಗಳು 200 ಕಿ.ಗ್ರಾಂ ತೂಕದ ಸಿಡಿತಲೆಗಳನ್ನು 290 ಕಿ.ಮೀ ದೂರದವರೆಗೆ ಹಾರುವ ಸಾಮರ್ಥ್ಯ ಹೊಂದಿದೆ. 2.8 ಮ್ಯಾಕ್ ಸಂಖ್ಯೆಗಿಂತ ಹೆಚ್ಚಿನ ವೇಗ ಹೊಂದಿರುವ ಕ್ಷಿಪಣಿಯಾಗಿದೆ. ಇದು ಭಾರತ ಮತ್ತು ರಷ್ಯ ಸಹಭಾಗಿತ್ವದ ಒಪ್ಪಂದದಲ್ಲಿ 1998ರ ಫೆಬ್ರವರಿಯಲ್ಲಿ ಪ್ರಾರಂಭಿಸಲ್ಪಟ್ಟ ಕ್ಷಿಪಣಿ. ಭಾರತದ ನೌಕಾಪಡೆ ಮತ್ತು ಭಾರತ ಸೈನ್ಯದಲ್ಲಿ ಈಗಾಗಲೇ ಬಳಕೆಯಲ್ಲಿ ತರಲಾಗಿದೆ.

**ಗಣಕ ಯಂತ್ರಗಳು:** ಅಮೇರಿಕಾ ಮತ್ತು ಜಪಾನ್ ನಂತರ ಸೂಪರ್ ಕಂಪ್ಯೂಟರ್‌ಗಳ ವಿನ್ಯಾಸಗಳಲ್ಲಿ ಮೂರನೇ ರಾಷ್ಟ್ರವಾಗಿ ಭಾರತ ಬೆಳೆದಿದೆ. ಪುಣೆಯ C-DAC ಸಂಸ್ಥೆಯ ಡಾ॥ ವಿಜಯ ಭಟ್ಕರ್‌ರವರು ನಿರೂಪಿಸಿರುವ ಪರಮ 10000. ಅಮೇರಿಕಾದ ಅದೇ ಸಾಮರ್ಥ್ಯದ ಗಣಕ ಯಂತ್ರದ ಪ್ರತಿಶತ 1/10 ರಷ್ಟು ಖರ್ಚಿನಲ್ಲಿ ಬೆಳವಣಿಗೆಯಾಗಿದೆ. ಇದು ಪ್ರತಿ ಸೆಕೆಂಡಿಗೆ ಒಂದು ಲಕ್ಷ ಕೋಟಿ ಲೆಕ್ಕ ಮಾಡುವ ಸಾಮರ್ಥ್ಯ ಹೊಂದಿದೆ.

(ಮುಂದಿನ ಸಂಚಿಕೆಗೆ....)

**ಅವಿನಾಶಿಯಾದ ಪ್ರೇಮವೆಂಬ ವಸ್ತುವೊಂದೇ ಜಗತ್ತಿನಲ್ಲಿ ನಿತ್ಯವಾದುದು. – ಜೇಮ್ಸ್ ಅಲೆನ್**

# ಸರ್ಕಾರಿ ಶಾಲೆಗೂ ಸುರಕ್ಷಾ ಕ್ರಮ ವಿಸ್ತರಿಸಲು ಆಗ್ರಹ

– ವಿಕ ಸುದ್ದಿಲೋಕ ಅಥಣಿ

ಇತ್ತೀಚೆಗೆ ರಾಜ್ಯದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಅತ್ಯಾಚಾರ ಮತ್ತು ದೌರ್ಜನ್ಯಗಳ ಬಗೆಗೆ ಮಾಧ್ಯಮದಲ್ಲಿ ವರದಿಯಾದ ಹಿನ್ನೆಲೆಯಲ್ಲಿ ಸರಕಾರ ಸುರಕ್ಷೆಯ ದೃಷ್ಟಿಯಿಂದ ಅಗತ್ಯವಾದ ಕೆಲ ಕ್ರಮಗಳನ್ನು ಜರುಗಿಸಬೇಕು ಎಂದು ಕೇವಲ ಖಾಸಗಿ ಶಾಲಾ, ಕಾಲೇಜುಗಳಿಗೆ ಸುತ್ತೋಲೆ ಹೊರಡಿಸಿದ್ದು, ಇದನ್ನು **ಎಲ್ಲ ಸರಕಾರಿ ಶಾಲೆಗಳಿಗೂ ವಿಸ್ತರಿಸಬೇಕು** ಎಂದು ವಿಧಾನ ಪರಿಷತ್ ಸದಸ್ಯ ಅರುಣ ಶಹಾಪೂರ ಸರಕಾರವನ್ನು ಆಗ್ರಹಿಸಿದರು.

ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದರು. ಅತ್ಯಾಚಾರ ದೌರ್ಜನ್ಯಗಳು ಕೇವಲ ಖಾಸಗಿ ಶಾಲೆಗಳಲ್ಲಿ ನಡೆಯುವುದಿಲ್ಲ ಇಂತಹ ಅನೇಕ ಪ್ರಕರಣಗಳು ಸರಕಾರಿ ಶಾಲೆಗಳಲ್ಲಿಯೂ ಕೂಡ ನಡೆದಿರುವ ಬಗೆಗೆ ದಾಖಲಾಗಿವೆ. ಅಲ್ಲದೆ ಸರಕಾರಿ ಶಾಲೆಗಳಲ್ಲಿ ಸುರಕ್ಷಿತ ದೃಷ್ಟಿಯಿಂದ ಅತೀ ಅವಶ್ಯ ಇರುವ ಯಾವುದೇ ಅಂಶಗಳಿಲ್ಲ ಹೀಗಾಗಿ ಸರಕಾರ ಹೊರಡಿಸಿರುವ ಸಿ.ಸಿ ಕ್ಯಾಮರಾ, ಭದ್ರತಾ ಸಿಬ್ಬಂದಿ, ಆಯಾ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ಶಾಲೆಗಳ ವಿವರ ನೀಡುವುದು, ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ವಿವರಗಳಂತಹ 50 ಕ್ಕೂ ಹೆಚ್ಚು ಅಗತ್ಯ ಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕು ಎಂದು ಸರಕಾರ ಸುತ್ತೋಲೆ ಹೊರಡಿಸಿದ್ದು, ತಕ್ಷಣ ಜಾರಿಗೆ ತರಬೇಕು ಎಂದು ಆದೇಶಿಸಿದೆ ಎಂದ ಅವರು ಈ ಎಲ್ಲ ಅಗತ್ಯ ಕ್ರಮಗಳನ್ನು ಸರಕಾರಿ ಶಾಲೆಗಳಲ್ಲಿಯೂ ಜಾರಿಗೆ ತಂದಾಗ ಮಾತ್ರ ಅತ್ಯಾಚಾರ ಮತ್ತು ದೌರ್ಜನ್ಯ ಪ್ರಕರಣಗಳನ್ನು ನಿಯಂತ್ರಿಸಲು ಸಾಧ್ಯ ಎಂದು ಹೇಳಿದರು.

**ಸರಕಾರವೂ ವರದಿ ತರಿಸಲಿ:** ಸರಕಾರ ಮಾಧ್ಯಮಗಳಲ್ಲಿ ವರದಿ ಬಂದ ಹಿನ್ನೆಲೆಯಲ್ಲಿ ಎಂದು ಸುತ್ತೋಲೆಯಲ್ಲಿ ನಮೂದಿಸುವ ಮೂಲಕ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಯತ್ನ ನಡೆಸುತ್ತಿರುವುದು ಇಲ್ಲಿ ಸ್ಪಷ್ಟವಾಗುತ್ತಿದ್ದು, ಕೇವಲ ಮಾಧ್ಯಮಗಳಲ್ಲಿ ಬಂದ ವರದಿಯನ್ನು ಆಧರಿಸಿ ಬೇಡ ಸರಕಾರ ತನ್ನ ವಿವಿಧ ಇಲಾಖೆಗಳಿಂದ ಬಂದ ವರದಿಯನ್ನೂ ಸಹ ಬಹಿರಂಗಗೊಳಿಸಿ ತನ್ನ ಜವಾಬ್ದಾರಿ ಹೆಚ್ಚಿಸಿಕೊಳ್ಳಬೇಕು ಎಂದ ಅವರು ಇಂತಹ ಗಂಭೀರ ವಿಷಯಗಳಲ್ಲಿಯೂ ಸರಕಾರ ಕೇವಲ ಅಗತ್ಯ ಕ್ರಮಗಳ ಸುತ್ತೋಲೆ ಹೊರಡಿಸಿ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಯತ್ನ ನಡೆಸುತ್ತಿದೆ ಎಂದು ಆರೋಪಿಸಿದರು.

ಶಿಕ್ಷಕರ ವರ್ಗಾವಣೆ ಸಂಬಂಧದಲ್ಲಿ ಪ್ರಾಥಮಿಕ ಶಿಕ್ಷಕರ ವರ್ಗಾವಣೆಯಲ್ಲಿ ಜಿಲ್ಲಾ ಘಟಕ, ಪ್ರೌಢ ಶಾಲಾ ಶಿಕ್ಷಕರ ವರ್ಗಾವಣೆ ಸಂಬಂಧದಲಿ ವಿಭಾಗ ಘಟಕವನ್ನು ಆಧರಿಸಬೇಕು ಮತ್ತು ಅಂತರ್ ಘಟಕ ವರ್ಗಾವಣೆಯನ್ನು ಒಂದು ಬಾರಿಯಿಂದ 3 ಬಾರಿಗೆ ಏರಿಸಬೇಕು ಹಾಗೂ ಪತಿ, ಪತ್ನಿ ಮತ್ತು ಅನಾರೋಗ್ಯಕ್ಕೆ ಸಂಬಂಧಿಸಿದ ವರ್ಗಾವಣೆಯನ್ನು ಶೇ.1 ರಿಂದ ಶೇ.5 ಕ್ಕೆ ಹೆಚ್ಚಿಸಬೇಕು ಎಂದು ಆಗ್ರಹಿಸಿದ ಅವರು ಬಿಇಓ ಮತ್ತು ಡಿಡಿಪಿಐ ಅಧಿಕಾರಿಗಳನ್ನು ಅವರ ಸ್ವಂತ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸದಂತೆ ಸರಕಾರ ಜಾರಿಗೆ ತಂದ ಹೊಸ ನಿಯಮಾವಳಿಯನ್ನು ಪಿ.ಯು ವಿಭಾಗಕ್ಕೂ ವಿಸ್ತರಿಸಬೇಕು ಎಂದು ಆಗ್ರಹಿಸಿದರು.


ಕಳೆದ ಅನೇಕ ವರ್ಷಗಳಿಂದ ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತಮ ಸಾಧನೆ ಮಾಡಿದ ಚಿಕ್ಕೋಡಿ ವಿಭಾಗದ ಡಿಡಿಪಿಐ ಕಛೇರಿಯಲ್ಲಿ ಮತ್ತಷ್ಟು ಸೌಲಭ್ಯಗಳನ್ನು ನೀಡಬೇಕು ಮತ್ತು ದೈಹಿಕ ಮತ್ತು ಎಲ್ಲ ವಿಷಯಗಳಿಗೆ ಮುಖ್ಯಸ್ಥರನ್ನು ನೇಮಕ ಮಾಡಬೇಕು ಹಾಗೂ ಕಛೇರಿಗೆ ಸ್ವಂತ ಕಟ್ಟಡ ಒದಗಿಸಬೇಕು ಎಂದ ಅವರು ಅನೇಕ ಜಿಲ್ಲೆಗಳಲ್ಲಿ ಶಿಕ್ಷಕರಿಗೆ ಸರಿಯಾಗಿ ಸಂಬಳ ಸಿಗುತ್ತಿಲ್ಲ ಈ ಬಗೆಗೆ ಅಧಿವೇಶನದಲ್ಲಿ ಪ್ರಶ್ನಿಸಿದಾಗ ಸಂಬಂಧ ಪಟ್ಟ ಸಚಿವರು ಹಾರಿಕೆ ಉತ್ತರ ನೀಡಿ ಜಾರಿಕೊಳ್ಳಲು ಯತ್ನಿಸಿರುವುದು ದುರಂತ ಎಂದರು ಚಂದ್ರಶೇಖರ ಗಸ್ತಿ, ಆರ್.ಬಿ ಪತ್ತಾರ, ಶಿರೀಶ ಕುಲಕರ್ಣಿ, ಶಂಕರ ಗಸ್ತಿ, ಡಾ॥ ಚನ್ನಪ್ಪಗೊಳ, ದೇವಣಗಾಂವಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

**ಸಹಸಾ ವಿದಧೀತ ನಕ್ರಿಯಾಂ ಅವಿವೇಕಃ ಪರಮಾಪದಾಂ ಪದಂ ।**
**ವೃಣುತೇಹಿ ರಿಮೃಷ್ಯಕಾರಿಣಂ ಖುಣಲುಬ್ಧಾಃ ಸ್ವಯಮೇವ ಸಂಪದಃ ॥**

ಹಿಂದೆ–ಮುಂಚೆ ವಿಚಾರಿಸದೆ ಯಾವುದೇ ಕೆಲಸವನ್ನೂ ಮಾಡಬಾರದು. ತಿಳುವಳಿಕೆ ಇಲ್ಲದೇ ಮಾಡಿದರೆ ಮುಂದೆ ಅಪಾಯವು ಬಂದೊದಗುತ್ತದೆ. ಸದ್ಗುಣಗಳಿದ್ದಲ್ಲಿ ಇರಲು ಅಪೇಕ್ಷಿಸುವ ಸಂಪತ್ತು, ಕೆಲಸ ಮಾಡುವವನ ಬಳಿಗೆ ತಾನಾಗಿಯೇ ಬರುತ್ತದೆ. ಆದ್ದರಿಂದ ಯಾವುದೇ ಕಾರ್ಯವನ್ನು ಮಾಡುವಾಗಲೂ ವಿಚಾರಿಸಿಯೇ ಮಾಡಬೇಕು.

**– ಕಿರಾತಾರ್ಜುನೀಯಂ**

**ನೀವು ಯಶಸ್ಸನ್ನು ಪಡೆಯಲು ದೃಢ ಪ್ರಯತ್ನ ಬೇಕು, ಅಪಾರ ಇಚ್ಛಾಶಕ್ತಿ ಬೇಕು. – ಸ್ವಾಮಿ ವಿವೇಕಾನಂದ.**




# ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ: ಸಿ8[8]ಶಾಶಿಅ ಕ ಭಾ ಪ01/2014–15 ದಿ:13.08.2014

## ಜ್ಞಾಪನ

**ವಿಷಯ: ಖಾಸಗಿ ಅನುದಾನಿತ ಸಂಸ್ಥೆಗಳಲ್ಲಿ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಕ್ಕಾಗಿ ಒಂದು ಹೆಚ್ಚುವರಿ ವಾರ್ಷಿಕ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ.**

**ಉಲ್ಲೇಖ: ಕರ್ನಾಟಕ ಸಿವಿಲ್ ಸೇವೆಗಳು [ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು] ನಿಯಮಗಳು 1974ರ ಮೇರೆಗೆ**

ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಕರ್ನಾಟಕ ಸಿವಿಲ್ ಸೇವೆಗಳು [ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು ನಿಯಮಗಳು 1974ರ ನಿಯಮ 3[1][1] ಮತ್ತು [111]ರಂತೆ ಖಾಸಗಿ ಅನುದಾನಿತ ಸಂಸ್ಥೆಗಳಲ್ಲಿನ ಸಿಬ್ಬಂದಿಗಳಿಗೆ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಕ್ಕಾಗಿ ಒಂದು ಹೆಚ್ಚುವರಿ ವಾರ್ಷಿಕ ವೇತನ ಬಡ್ತಿ ಸೌಲಭ್ಯವನ್ನು ವಿಸ್ತರಿಸುವ ಸಂಬಂಧ ತಗಲಬಹುದಾದ ವೆಚ್ಚದ ತಃಖ್ತೆಯನ್ನು ಶಾಲಾವಾರು ಪ್ರತಿ ಸಿಬ್ಬಂದಿವಾರು ತಯಾರಿಸಿ ಸಲ್ಲಿಸಬೇಕಾಗಿದೆ. ಅದರಂತೆ ದಿ: 10.01.1974 ರಿಂದ 02.09.1987ರ ಅವಧಿಯಲ್ಲಿ ಅನುದಾನ ಸಹಿತವಾಗಿ ನೇಮಕಾತಿ ಹೊಂದಿದ ಸಿಬ್ಬಂದಿಗೆ ನೇಮಕಾತಿ ದಿನಾಂಕದಿಂದ ಕನ್ನಡ ಭಾಷಾ ವಿನಾಯಿತಿಯ ಒಂದು ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿ ನೀಡಿ ವೇತನ ನಿಗಧಿಪಡಿಸಿದಲ್ಲಿ ಪ್ರತಿ ಸಿಬ್ಬಂದಿಗೆ ತಗಲಬಹುದಾದ ವೆಚ್ಚದ ತಃಖ್ತೆಯನ್ನು ನಮೂನೆಯಲ್ಲಿ ಶಾಲಾವಾರು ಪ್ರತಿ ಸಿಬ್ಬಂದಿವಾರು ತುರ್ತಾಗಿ ಹಾರ್ಡ್ ಕಾಪಿ ಮತ್ತು ಸಾಫ್ಟ್ ಕಾಪಿಯೊಂದಿಗೆ ಸಲ್ಲಿಸಲು ತಿಳಿಸಿದೆ. (ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಪ್ರತ್ಯೇಕವಾಗಿ)

ಸಹಿ/–

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ

---

➢ ಪುಟ 3 ರಿಂದ..... **ರಾಷ್ಟ್ರ ನಿರ್ಮಾಪಕರು**

ಮೌಲ್ಯಗಳನ್ನೂ ನೀಡಬೇಕಾಗಿದೆ. ಸತ್ಯ, ಅಹಿಂಸೆ, ಸ್ನೇಹಪರತೆ ಮುಂತಾದ ಮೌಲ್ಯಗಳನ್ನು ಶಿಕ್ಷಕರು ವಿದ್ಯಾರ್ಥಿಗಳ ಜೊತೆಗಿನ ಮುಖಾ–ಮುಖಿ ಸಂಪರ್ಕದಿಂದ ವಿಶದಪಡಿಸಬಹುದು. ಪುಸ್ತಕಗಳಲ್ಲಿ ಅಥವ ಅಂತರ್ಜಾಲಗಳಲ್ಲಿ ವಿಷಯಗಳು ಎಷ್ಟೇ ಸಂಗ್ರಹಿತವಾಗಿದ್ದರೂ ಪಾಲಿಸಬೇಕಾದ ಮೌಲ್ಯಗಳನ್ನು ನಮ್ಮ ಯುವ ಪೀಳಿಗೆಯವರಲ್ಲಿ ಮೈಗೂಡಿಸುವಲ್ಲಿ ನೆರವಾಗುವುದಿಲ್ಲ. ಮಾನವ ಭಾವನೆಗಳನ್ನು ಮನೆಗಳಿಗೆ ತಲುಪಿಸುವ ಪ್ರಬಲ ಸಾಮರ್ಥ್ಯ ಇರುವುದು ಶಿಕ್ಷಕರಿಗೆ ಮಾತ್ರ. ಅವರು ಮಾತ್ರ ಕಲಿಕೆಗೆ ಸ್ಫೂರ್ತಿ ನೀಡಬಲ್ಲರು. ವ್ಯಕ್ತಿಯ ಸ್ವಭಾವವನ್ನು ರೂಪಿಸುವುದರಲ್ಲಿ ಮತ್ತು ನಡತೆಯನ್ನು ಎರಕಹೊಯ್ಯುವುದರಲ್ಲಿ ಶಿಕ್ಷಕರೇ ಉತ್ತಮ ಆಪ್ತ ಸಲಹೆಗಾರರು. ಆದರ್ಶ ಶಿಕ್ಷಕ ತನ್ನ ವಿದ್ಯಾರ್ಥಿಯು ಪ್ರಶ್ನೆ ಮಾಡುವುದನ್ನು ಪ್ರೋತ್ಸಾಹಿಸುತ್ತಾನೆ ಮತ್ತು ವಿದ್ಯಾರ್ಥಿಯನ್ನು ತೆಗಳುವುದಿಲ್ಲ. ವಿದ್ಯಾರ್ಥಿಯ ಅಭಿರುಚಿಯನ್ನು ಗುರುತಿಸಿ ಪ್ರತಿಭೆಯನ್ನು ರೂಪಿಸುವವನೇ ನಿಜವಾದ ಶಿಕ್ಷಕ. ಆತ್ಮ ಶೋಧನೆ ಮತ್ತು ಚಿಂತನೆಯ ಮೂಲಕ ಸ್ವಯಂ ವಿಚಾರಕರನ್ನು ರೂಪಿಸುವಲ್ಲಿ ಶಿಕ್ಷಕನೇ ಶ್ರೇಷ್ಠ.

ಭಾರತವು ಎಲ್ಲ ಕಾಲದಲ್ಲೂ ಜ್ಞಾನಕ್ಕಾಗಿ ಗೌರವಿಸಲ್ಪಟ್ಟಿದೆ. ಈಗ ನಾವು 'ಜ್ಞಾನ ಆರ್ಥಿಕತೆ'ಯ ಕಡೆಗೆ ಧಾವಿಸುತ್ತಿದ್ದೇವೆ ಮತ್ತು ಭಾರತವು ಅನಿವಾರ್ಯವಾಗಿ 'ಉತ್ಕೃಷ್ಟ ಜ್ಞಾನ ಶಕ್ತಿ'ಯನ್ನು ಹೊಂದಲೇ ಬೇಕಾಗಿದೆ. ಸಂದರ್ಭಕ್ಕನುಗುಣವಾಗಿ ಸಮರ್ಥರಾಗಲು ಸಿದ್ದಾಂತ ಮತ್ತು ಅನುಷ್ಠಾನಗಳ ನಡುವಿನ ಕಂದಕವನ್ನು ಕಡಮೆಗೊಳಿಸಬೇಕು. ನಮ್ಮಲ್ಲಿ ಜಗತ್ತಿನಲ್ಲೇ ಅತ್ಯುತ್ತಮರಾದ ವಿದ್ಯಾರ್ಥಿಗಳಿದ್ದಾರೆ. ಆದರೆ ನಮ್ಮ ಶಾಲಾ ಕಾಲೇಜುಗಳಲ್ಲಿ ಅತ್ಯುತ್ತಮ ದರ್ಜೆಯ ಅಧ್ಯಾಪಕ ವರ್ಗದ ಕೊರತೆಯಿದೆ. ಕಲಿಕೆಯ ಉಲ್ಲಾಸವನ್ನು ಕಳೆದುಕೊಳ್ಳದ ಉತ್ತಮ ವ್ಯಕ್ತಿಗಳನ್ನು ರೂಪಿಸುವಲ್ಲಿ ನಾವೆಲ್ಲರೂ ನಮ್ಮ ಪ್ರಯತ್ನವನ್ನು ಮಾಡೋಣ.

"ಜಗತ್ತಿನಾದ್ಯಂತ ಮಕ್ಕಳು ಶಾಲೆಗೆ ಓಡುತ್ತಾರೆ ಮತ್ತು ಮನೆಗೆ ನಡೆದು ಬರುತ್ತಾರೆ" ಎನ್ನುವ ದಿನಕ್ಕಾಗಿ ಎದುರು ನೋಡೋಣ ಮತ್ತು ಡಾ॥ ರಾಧಾಕೃಷ್ಣನ್ನರ ನೆನಪಿನಲ್ಲಿ ಆಚರಿಸುವ 'ಶಿಕ್ಷಕ ದಿನಾಚರಣೆಯನ್ನು ಪ್ರತಿದಿನ ಹೀಗೆ ಆಚರಿಸುವುದರ ಮೂಲಕ ರಾಧಾಕೃಷ್ಣನ್ನರಿಗೆ ನಮನವನ್ನು ಸಲ್ಲಿಸೋಣ.

■

# ಬೆಂಗಳೂರು ದಕ್ಷಿಣ ಜಿಲ್ಲೆ
# 29ನೇ ಪ್ರತಿಭಾ ಪುರಸ್ಕಾರ ಸಮಾರಂಭ

ಹಿಂದೆ ಭಾರತದಲ್ಲಿ ಗುರುಕುಲ ಪದ್ಧತಿ ಇತ್ತು. ಅಲ್ಲಿ ವಿದ್ಯಾರ್ಥಿಗಳು 16 ವಿದ್ಯೆಗಳನ್ನು ಕಲಿಯುತ್ತಿದ್ದರು. ಜೀವನಕ್ಕೆ ಬೇಕಾದ ಅಮೂಲ್ಯವಾದ ಶಿಕ್ಷಣವನ್ನು ಅಲ್ಲಿ ನೀಡಲಾಗುತ್ತಿತ್ತು. ಜೀವನ ಮೌಲ್ಯಗಳನ್ನು ಕಲಿಸಲಾಗುತ್ತಿತ್ತು. ಆದರೆ ಈಗಿನ ಶಿಕ್ಷಣ ಪದ್ಧತಿಯಿಂದಾಗಿ ಕೇವಲ ಗುಮಾಸ್ತರನ್ನು ತಯಾರಿಸುವ ಕಾರ್ಯ ನಡೆಯುತ್ತಿದೆ. ಬದುಕಲು ಬೇಕಾದ ನೈಜ ಶಿಕ್ಷಣ ಇಂದು ದೊರೆಯತ್ತಿಲ್ಲ ಎಂದು ಟೆಂಬಲ್ ಆಫ್ ಸಕ್ಸಸ್‌ನ ಮುಖ್ಯಸ್ಥರಾಗಿರುವ ಪರಮಪೂಜ್ಯ ಶ್ರೀ ಶ್ರೀ ಶ್ರೀ ಸಾಯಿದತ್ತ ರಘುನಾಥ ಗುರೂಜಿಯವರು ಕಳವಳ ವ್ಯಕ್ತಪಡಿಸಿದರು. ಕಳೆದ 31 ವರ್ಷಗಳಿಂದ ಅಮೃತ ಚಿಕಿತ್ಸೆ ಮೂಲಕ ಸಹಸ್ರಾರು ಜನರಿಗೆ ಆರೋಗ್ಯ ಭಾಗ್ಯವನ್ನು ಕರುಣಿಸುತ್ತಿರುವ ಪೂಜ್ಯ ಗುರೂಜಿಯವರು ಬೆಂಗಳೂರು ದಕ್ಷಿಣ ಜಿಲ್ಲೆಯ ವತಿಯಿಂದ ಆಯೋಜಿಸಿದ್ದ 29ನೆಯ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾರ್ಗದರ್ಶನ ಮಾಡಿದರು.

ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದರೂ, ಕೇಂದ್ರ ಸರ್ಕಾರದ ಮಂತ್ರಿಗಳೂ ಆಗಿರುವ ಸನ್ಮಾನ್ಯ ಶ್ರೀ ಅನಂತಕುಮಾರ್ ಅವರು ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ನಾವೆಲ್ಲರೂ ಸತ್ಕರ್ಮಗಳನ್ನು ಮಾಡುವುದನ್ನು ರೂಢಿಸಿಕೊಳ್ಳೋಣ. ಪ್ರತಿನಿತ್ಯ. ಪ್ರತಿಕ್ಷಣ ಒಳ್ಳೆಯ ಕಾರ್ಯಮಾಡುವ ಸಂಕಲ್ಪ ಮಾಡೋಣ. ಸ್ವಾರ್ಥ ಬಿಟ್ಟು ಸಮಾಜಸೇವೆಯತ್ತ ಮುನ್ನಡೆಯೋಣ ಎಂಬ ಕರೆನೀಡಿದರು. ಸಜ್ಜನರು, ಪ್ರತಿಭಾನ್ವಿತರು, ಸಾಧಕರನ್ನು ಸಂಘಟಿಸಿ ಅವರನ್ನು ಸಮಾಜದ ಕಾರ್ಯಕ್ಕಾಗಿ ಶ್ರಮಿಸುವಂತೆ ಪ್ರೇರೇಪಿಸೋಣ ಎಂದು ತಿಳಿಸಿದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ನಡೆಸುತ್ತಿರುವ ಪ್ರತಿಭಾಪುರಸ್ಕಾರ ಸಮಾರಂಭದ ಬಗ್ಗೆ ಹಾಗೂ ಶಿಕ್ಷಕ ಸಂಘದ ಕಾರ್ಯವೈಖರಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ನ್ಯೂ ಬಾಲ್ಡ್‌ವಿನ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾಗಿರುವ ಶ್ರೀ ಟಿ. ವೇಣುಗೋಪಾಲ್‌ರವರು ಗೌರವ ಅತಿಥಿಗಳಾಗಿ ಸಮಾರಂಭದಲ್ಲಿ ಭಾಗವಹಿಸಿದ್ದರು. ಪೋಷಕರು ಹೆಮ್ಮೆಪಡುವಂಥ ಕೆಲಸವನ್ನು ಮಾಡಬೇಕು. ಕಾಯಕವೇ ಕೈಲಾಸ ಎಂಬ ಮಾತನ್ನು ಸಾಕಾರಗೊಳಿಸಬೇಕೆಂದು ಕಿವಿಮಾತನ್ನು ಹೇಳಿದರು.

ಗೌರವ ಅತಿಥಿಗಳಲ್ಲಿ ಒಬ್ಬರೂ ಅದಮ್ಯಚೇತನದ ಅಧ್ಯಕ್ಷರೂ ಆದ ಡಾ॥ ತೇಜಸ್ವಿನಿ ಅನಂತಕುಮಾರ್ ಸಮಾರಂಭದಲ್ಲಿ ಪಾಲ್ಗೊಂಡು ವಿದ್ಯಾರ್ಥಿಗಳಿಗೆ ಪರಿಸರದ ಬಗ್ಗೆ ಕಾಳಜಿಯನ್ನು ಬೆಳೆಸಿಕೊಳ್ಳುವಂತೆ ತಿಳಿಹೇಳಿದರು.

ಅಖಿಲ ಭಾರತ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ರಾಷ್ಟ್ರೀಯ ಸಂರಕ್ಷಕರಾಗಿರುವ ಪ್ರೊ॥ ಕೃ. ನರಹರಿಯವರು ಎಲ್ಲರಿಗೂ ಸಂಕಲ್ಪ ಬೋಧಿಸಿದರು. ಮಾನ್ಯ ಕೃ. ಸೂರ್ಯನಾರಾಯಣರಾವ್ ಅವರು ರಚಿಸಿರುವ ಸ್ವಾಮಿ ವಿವೇಕಾನಂದ; ಸ್ವಾತಂತ್ರ್ಯ ಸಂಗ್ರಾಮದ ಪ್ರೇರಣಾ ಸ್ರೋತ ಎಂಬ ಪುಸ್ತಕವನ್ನು ಲೋಕಾರ್ಪಣೆ ಮಾಡಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯದ ಪ್ರಧಾನ ಕಾರ್ಯದರ್ಶಿಗಳಾಗಿರುವ ಶ್ರೀ ಶಿವಾನಂದ ಸಿಂಧನಕೇರಾರವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು.

ಸಮಾರಂಭದಲ್ಲಿ 250 ಶಾಲಾ ಪ್ರಥಮಿಗರನ್ನು, 40 ವಿಕಲಚೇತನರು 35 ಶಿಕ್ಷಕರು ಹಾಗೂ ಅವರ ಮಕ್ಕಳನ್ನು ಸನ್ಮಾನಿಸಲಾಯಿತು. ಶ್ರೀ ವಿ. ರಾಜುರವರು ಸಮಾರಂಭದ ವೇದಿಕೆಯಲ್ಲಿದ್ದ ಗಣ್ಯರನ್ನು ಪರಿಚಯಿಸಿ ಸರ್ವರನ್ನೂ ಸ್ವಾಗತಿಸಿದರು. ಬೆಂಗಳೂರು ದಕ್ಷಿಣ ಜಿಲ್ಲೆಯ ಕಾರ್ಯದರ್ಶಿಗಳಾಗಿರುವ ಶ್ರೀ ಸುರೇಂದ್ರರವರು ವಂದಿಸಿದರು. ಶ್ರೀಮತಿ ಸೌಭಾಗ್ಯ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶ್ರೀಮತಿ ಪಿ.ಆರ್. ರುಕ್ಮಿಣಿಯವರು ದಾನಿಗಳಿಗೆ ಕೃತಜ್ಞತೆ ಸಲ್ಲಿಸಿದರು. ಶ್ರೀ ನಿರೂಪ್. ಎಸ್. ರಾಣ್ಯ ಅವರು ಪ್ರಾರ್ಥಿಸಿದರು. ಕುಮಾರಿ ಸೌಮ್ಯ ವಂದೇ ಮಾತರಂ ಗೀತೆಯನ್ನು ಹಾಡಿದರು. ಶ್ರೀಮತಿ ಜಿ.ಎನ್. ವಾಸುಕಿಯವರು ಸಮಾರಂಭದ ನಿರೂಪಣೆ ಮಾಡಿದರು.

**ವಿ. ರಾಜ**
**ಕರ್ನಾಟಕ ರಾಜ್ಯ**
**ಮಾಧ್ಯಮಿಕ ಶಿಕ್ಷಕ ಸಂಘ**
**ಬೆಂಗಳೂರು ದಕ್ಷಿಣ ಜಿಲ್ಲೆ ಅಧ್ಯಕ್ಷರು**



# ಗುರುವಂದನಾ ದಿನ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ಗಂಗಾನಗರದಲ್ಲಿ ದಿನಾಂಕ 30-07-2014 ಬುಧವಾರದಂದು ಪೂಜ್ಯರಾದ ಶ್ರೀ ವೇದವ್ಯಾಸರ ಜನ್ಮದಿನದ ನಿಮಿತ್ತ ಗುರುವಂದನ ಕಾರ್ಯಕ್ರಮವು ಆಯೋಜಿತವಾಗಿತ್ತು.

ಈ ಕಾರ್ಯಕ್ರಮಕ್ಕೆ ಮುಖ್ಯ ವಕ್ತಾರರಾಗಿದ್ದ ಬೆಂಗಳೂರು ದಕ್ಷಿಣಜಿಲ್ಲೆಯ ಕ.ರಾ.ಮಾ.ಶಿ.ಸಂಘದ ಅಧ್ಯಕ್ಷರು ಹಾಗೂ ನ್ಯಾಷನಲ್ ಪ್ರೌಢಶಾಲೆಯ ಕನ್ನಡ ಉಪಾಧ್ಯಾಯರಾದ ಶ್ರೀಯುತ ವಿ.ರಾಜ ಇವರು ಮಾತನಾಡುತ್ತಾ ಶ್ರೀ ವೇದವ್ಯಾಸರ ಜೀವನ, ಸಾಧನೆ ಮತ್ತು ಭಾರತೀಯ ಶ್ರೇಷ್ಠ ಗುರುಪರಂಪರೆಗೆ ಅವರ ಕೊಡುಗೆ ಏನೆಂಬುದನ್ನು ತಿಳಿಸಿಕೊಟ್ಟರು. ಅನೇಕ ಲೌಕಿಕ ದೃಷ್ಟಾಂತಗಳನ್ನು ಉಲ್ಲೇಖಿಸಿ, ನಮ್ಮ ಭಾರತೀಯ ಜೀವನ ಪದ್ಧತಿಯಲ್ಲಿ ಗುರುಗಳ ಸ್ಥಾನದ ಮಹತ್ವವನ್ನು ಅತ್ಯಂತ ಅರ್ಥಗರ್ಭಿತವಾಗಿ ಪ್ರಸ್ತಾಪಿಸಿದರು. 'ಶಿಷ್ಯನ ಹಿತವನ್ನು ಬಯಸುವವನೇ ನಿಜವಾದ ಗುರು. ಶಿಷ್ಯವಾತ್ಸಲ್ಯ, ಸಚ್ಚಾರಿತ್ರ್ಯ, ಪರಿಣಾಮಕಾರಿ ಬೋಧನೆ ಮುಂತಾದ ವಿಶೇಷತೆಗಳನ್ನು ಪ್ರಾಚೀನ ಗುರುಪರಂಪರೆಯಲ್ಲಿ ನಾವು ಕಾಣುತ್ತೇವೆ. ವೇದವ್ಯಾಸರು ವೇದ ರಾಶಿಯನ್ನು ವಿಭಜಿಸಿ, ಉಪನಿಷತ್ತುಗಳನ್ನು, ಮಹಾಭಾರತವನ್ನು ಬ್ರಹ್ಮಸೂತ್ರಗಳನ್ನು ರಚಿಸಿ, ಭಾರತೀಯರಿಗೆ ಮಹದುಪಕಾರ ಮಾಡಿರುತ್ತಾರೆ' ಎಂಬುದಾಗಿ ವ್ಯಾಸರ ಉನ್ನತ ವ್ಯಕ್ತಿತ್ವದ ಪರಿಚಯವನ್ನು ಮಾಡಿಕೊಟ್ಟರು.

ಕ.ರಾ.ಮಾ.ಶಿ.ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವಾನಂದ ಸಿಂಧನಕೇರಾ ರವರು ಪ್ರಸ್ತುತ ಸನ್ನಿವೇಶದಲ್ಲಿ ಗುರುವಂದನೆಯ ಮಹತ್ವವನ್ನು ಸಭೆಗೆ ತಿಳಿಸಿಕೊಟ್ಟರು. ಕ.ರಾ.ಮಾ.ಶಿ. ಸಂಘದ ಬೆಂಗಳೂರು ಉತ್ತರಜಿಲ್ಲೆಯ ಅಧ್ಯಕ್ಷರಾದ ಡಾ. ಸೂಗುರು ತಿಪ್ಪೇಸ್ವಾಮಿಯವರು ಗುರುಪರಂಪರೆಯನ್ನು ಸವಿಸ್ತಾರವಾಗಿ ತಿಳಿಸಿಕೊಡುತ್ತಾ, ಏಕಲವ್ಯ ದ್ರೋಣಚಾರ್ಯರ ಉದಾಹರಣೆಯ ಮೂಲಕ ಪುರಾಣ ಹಾಗೂ ಕಾವ್ಯಗಳಲ್ಲಿ ಬರುವ ಗುರುಶಿಷ್ಯರ ಪರಿಚಯ ಮಾಡಿಕೊಟ್ಟರು.

ಕಾರ್ಯಕ್ರಮದ ಆರಂಭದಲ್ಲಿ ಕ.ರಾ.ಮಾ.ಶಿ. ಸಂಘದ ರಾಜ್ಯ ಖಜಾಂಚಿಗಳಾದ ಶ್ರೀ ಜೆ.ಎಮ್.ಜೋಶಿ ರವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಸಂಘದ ಚಟುವಟಿಕೆಗಳನ್ನು ಸಭೆಗೆ ವಿವರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ ಜಿ.ಆರ್.ವಿ.ಪಬ್ಲಿಕ್ ಶಾಲೆ ಮತ್ತು ಕಾಲೇಜಿನ ಮಾನ್ಯ ಪ್ರಾಂಶುಪಾಲರಾದ ಶ್ರೀಮತಿ ಕಲ್ಪನಾರವರು ಪ್ರಸ್ತುತ ವಾತಾವರಣದಲ್ಲಿ ಸೇವಾಭಾವನೆಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಅಭಿಪ್ರಾಯಪಟ್ಟರು. ಸಂಘದ ಚಟುವಟಿಕೆಗಳನ್ನು ಶ್ಲಾಘಿಸಿದರು. ಕಾರ್ಯಕ್ರಮದಲ್ಲಿ ಪ್ರೊ|| ಕೆ.ನರಹರಿಜೀ ಗೌರವ ಅತಿಥಿಗಳಾಗಿ, ಶ್ರೀ ಜಿ.ಎಸ್.ಕೃಷ್ಣಮೂರ್ತಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಕಾರ್ಯಕ್ರಮಕ್ಕೆ ಶೋಭೆ ತಂದುಕೊಟ್ಟರು. ಬೆಂಗಳೂರು ಉತ್ತರಜಿಲ್ಲೆಯ ಉಪಾಧ್ಯಕ್ಷರಾದ ಶ್ರೀ ಗಂಗಪ್ಪರವರು ಎಲ್ಲರನ್ನೂ ವಂದಿಸಿದರು. ಶ್ರೀ ನಾರಾಯಣ ಅನಂತ ಭಟ್ಟ ಇವರು ಕಾರ್ಯಕ್ರಮವನ್ನು ನಿರ್ವಹಿಸಿದರು. ●

# ಮೇರುವ್ಯಕ್ತಿ – ಗುರು

ರಾಷ್ಟ್ರಪತಿ ಘನವೆಂಬೆನೆ?
ಕಾರ್ಯಾಂಗದ ಮೇಲಡಗಿತ್ತು.
ಕಾರ್ಯಾಂಗ ಘನವೆಂಬೆನೆ?
ಶಾಸಕಾಂಗದ ಮೇಲಡಗಿತ್ತು.
ಶಾಸಕಾಂಗ ಘನವೆಂಬೆನೆ?
ಜನಸಾಮಾನ್ಯರ ಮತಪತ್ರದ ಮೇಲಡಗಿತ್ತು.
ಜನಸಾಮಾನ್ಯರ ಮತಪತ್ರ ಘನವೆಂಬೆನೆ?
ಜನರ ಬುದ್ಧಿಮತ್ತೆಯ ಮೇಲಡಗಿತ್ತು.
ಶ್ರೀಸಾಮಾನ್ಯನ ಬುದ್ಧಿಮತ್ತೆಯೇ ಮೇಲೆಂಬೆನೆ?
ಅದು ನಿರಂಕುಶಮತಿಯ ಮೇಲಡಗಿತ್ತು.
ಅಲ್ಲಿ ನಿರಂಕುಶಮತಿಯ ಸ್ಫೋಟವಿತ್ತು

ಜೀವನದ ಗುರಿಯ ಬೆಳಕನಿತ್ತ
ಬಾಳ ಪಯಣಕೆ ಅರಿವನಿತ್ತ
ಗುರುವೇ ಎಂದೆಂದೂ
ಘನವೆಂದು ಪೂಜೆಗೊಳ್ವನು.
ಸದ್ಗುರವು ಸದಾ ತನ್ನ
ಪ್ರಿಯ ಶಿಷ್ಯರ ಹೃದಯದೊಳ್ನಿಲ್ವನು.

**ಚಿಕ್ಕಸ್ವಾಮಿ**
ವಿಷಯ ಪರಿವೀಕ್ಷಕರು,
ಉಪನಿರ್ದೇಶಕರ ಕಛೇರಿ,
ಸಾ.ಶಿ.ಇ., ಮಂಡ್ಯ ಜಿಲ್ಲೆ, ಮಂಡ್ಯ.

“ ಓ ನನ್ನ ಯುವ ಸ್ನೇಹಿತರೇ, ಮೊದಲು ಬಲಶಾಲಿಗಳಾಗಿ, ನಿಮಗೆ ನಾನು ನೀಡುವ ಸಲಹೆ ಇದು. ಭಗವದ್ಗೀತೆಯನ್ನು ಓದುವುದಕ್ಕಿಂತಲೂ ಫುಟ್ಬಾಲ್ ಆಟದಿಂದ ನೀವು ಸ್ವರ್ಗಕ್ಕೆ ಹತ್ತಿರವಾಗುತ್ತೀರಿ. ಇವು ಕೆಚ್ಚೆದೆಯ ಮಾತುಗಳು. ಆದರೆ ನಾನು ಅವನ್ನು ಹೇಳಲೇಬೇಕಾಗಿದೆ. ನಿಮ್ಮ ತೋಳುಗಳು ಹಾಗೂ ಮಾಂಸಖಂಡಗಳು ಬಲವನ್ನು ಸ್ವಲ್ಪ ಹೆಚ್ಚಿಸಿಕೊಳ್ಳುವುದರಿಂದ, ನೀವು ಭಗವದ್ಗೀತೆಯನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳುವಿರಿ.

**– ಸ್ವಾಮಿ ವಿವೇಕಾನಂದ**

# ವಿದ್ಯಾರ್ಥಿ ಮಿತ್ರ – 11





**1. ರಸಪ್ರಶ್ನೆ**


ಕನ್ನಡ ಭಾಷೆಯು ಕರ್ನಾಟಕದ ಪ್ರಮುಖ ಭಾಷೆಯಾಗಿದೆ. ಹಾಗೆಯೇ ಈ ಕೆಳಗಿನ ಭಾಷೆಗಳು ಯಾವ ರಾಜ್ಯಗಳ ಪ್ರಮುಖ ಭಾಷೆಗಳಾಗಿವೆ ?

ಅ) ವ್ರೊ, ಕುಕು–ಚಿನ್–ನಾಗ್ ಆ) ಗಾರೋ, ಖಾಸಿ ಇ) ಕೊಕ್‌ಬೊರೊಕ್

ಈ) ಮಿಝೊ ಉ) ಒರಿಯಾ

**2. ಪ್ರಸಿದ್ಧವಾಗಿರುವ ಈ ದೇವಾಲಯಗಳನ್ನು ಗುರುತಿಸಬಲ್ಲಿರಾ ?**


1


2


3


4

**3. ಈ ವಿಶ್ವವಿದ್ಯಾನಿಲಯಗಳು ಯಾವ ನಗರದಲ್ಲಿವೆ ಹೇಳಬಲ್ಲಿರಾ ?**

1. ಬಿ. ಆರ್. ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾನಿಲಯ
2. ನೇತಾಜಿ ಸುಭಾಷ್ ಮುಕ್ತ ವಿಶ್ವವಿದ್ಯಾನಿಲಯ
3. ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ
4. ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾನಿಲಯ
5. ಮೈಸೂರು ವಿಶ್ವವಿದ್ಯಾನಿಲಯ

**4. ಈ ಬಿರುದುಗಳನ್ನು ಹೊಂದಿದ್ದ ಮಹಾಪುರುಷರು ಯಾರೆಂದು ಹೇಳಬಲ್ಲಿರಾ ?**

1. ವೀರ 2. ಗುರುದೇವ 3. ರಾಜಾಜಿ

4. ಪಂಜಾಬ ಕೇಸರಿ 5. ಆಚಾರ್ಯ

## ವಿದ್ಯಾರ್ಥಿ ಮಿತ್ರ – 10 ರ ಉತ್ತರ

**1. ರಸಪ್ರಶ್ನೆ** : ಅ) ವರ್ಲ್ಡ್ ವೈಡ್ ವೆಬ್ ; ಆ) ಸ್ಯಾಟಲೈಟ್ ಲಾಂಚ್ ವೆಹಿಕಲ್ ; ಇ) ಸಬ್‌ಸ್ಕ್ರೈಬರ್ ಟ್ರಂಕ್ ಡಯಲಿಂಗ್ ; ಈ) ಫುಡ್ ಅಂಡ್ ಅಗ್ರಿಕಲ್ಚರ್ ಆರ್ಗನೈಸೇಷನ್ ; ಉ) ನ್ಯಾಷನಲ್ ಸ್ಪೋರ್ಟ್ಸ್ ಆರ್ಗನೈಸೇಷನ್

**2. ರಾಜ್ಯಪಾಲರುಗಳು :** 1) ನಿಟ್ಟೂರು ಶ್ರೀನಿವಾಸರಾವ್ ; 2) ಜಯಚಾಮರಾಜ ಒಡೆಯರ್ ; 3) ವಿ.ವಿ.ಗಿರಿ ; 4) ಭಾನುಪ್ರತಾಪ್ ಸಿಂಗ್

**3. ಗಾದೆಗಳು :** 1. ಕಾಲಿದ್ದವರು ಹಂಪೆಯನ್ನು ನೋಡಬೇಕು ; 2. ಶನೀಶ್ವರಬಿಡ ; 3. ಸುಬ್ರಹ್ಮಣ್ಯನಿಗಿಂತ ದೇವರಿಲ್ಲ ; 4. ರೊಕ್ಕಿದ್ದವನಿಗೆ ಪಟ್ಟಣ ; 5. ಪುತ್ತೂರು ಕೊಡೆ

**4. ಅರ್ಥಪೂರ್ಣ ಪದಗಳು :** ಚಂದ್ರವಳ್ಳಿ ಶಾಸನ, ಬಾದಾಮಿ ಚಾಲುಕ್ಯರು, ಇಮ್ಮಡಿ ಪುಲಿಕೇಶಿ, ಬನವಾಸಿ ಕದಂಬರು, ಕಲ್ಯಾಣಿ ಚಾಲುಕ್ಯರು, ಕಳಚೂರ್ಯರು, ತಲಕಾಡಿನ ಗಂಗರು, ಕರಾವಳಿ ಪ್ರದೇಶ, ಸಹ್ಯಾದ್ರಿ ಪರ್ವತ, ದಕ್ಷಿಣ ಪ್ರಸ್ಥಭೂಮಿ.

(ಉತ್ತರಗಳು ಮುಂದಿನ ಸಂಚಿಕೆಯಲ್ಲಿ...)

– ವಿ. ರಾಜ, ಅಧ್ಯಾಪಕರು, ನ್ಯಾಷನಲ್ ಹೈಸ್ಕೂಲ್, ಬೆಂಗಳೂರು

# ಸ್ವಾತಂತ್ರ್ಯ ದಿನಾಚರಣೆ : ಅಲ್ಲಿ ! ಇಲ್ಲಿ!

ಕಳೆದ ಸಂಚಿಕೆಯಿಂದ...

ಈ ಬಾರಿ ಜುಲೈ 4, ವಾರಾಂತ್ಯದ ಶುಕ್ರವಾರ. ಹಿಂದಿನ ದಿನವೇ ನೂರಾರು ಮನೆಗಳ ಮೇಲೆ ರಾಷ್ಟ್ರೀಯ ಧ್ವಜ. ಮರುದಿನ ಬೆಳಗ್ಗೆ ಸರ್ಕಾರಿ ಕಾರ್ಯಕ್ರಮ. ಆದರೆ ಇದು ವಿಶೇಷವಲ್ಲ. ನಮ್ಮಲ್ಲೂ ಆಗುತ್ತದೆ. ವಿಶೇಷವೆಂದರೆ ಮನೆಮನೆಯಲ್ಲೂ ಸ್ವಾತಂತ್ರ್ಯ ಹಬ್ಬದ ಸಂಭ್ರಮ. ವಾರದ ಮೊದಲೇ ಪಟಾಕಿ ಅಂಗಡಿಗಳಿಂದ ಪಟಾಕಿ ತಂದಿಟ್ಟುಕೊಂಡು, ನೆಂಟರಿಷ್ಟರನ್ನು ಮನೆಗೆ ಕರೆದು ಊಟೋಪಚಾರ ಮುಂದಿನ ಮೂರು ದಿನ ನಮ್ಮಲ್ಲಿನ ದೀಪಾವಳಿಯಂತೆ ಪಟಾಕಿಸಿಡಿಸಿ ಆನಂದಪಡುತ್ತಾರೆ. ಸಂಜೆ ಪ್ರತಿ ಊರಿನಲ್ಲೂ ಬೇರೆ ಬೇರೆ ಉದ್ಯಾನವನಗಳಲ್ಲಿನ ಸಮಾರಂಭಗಳಲ್ಲಿ ಎಳೆಮಕ್ಕಳಿಂದ ಕೈಕಾಲು ನಡುಗುವ ಮುದುಕರವರೆಗೆ ಸಾವಿರಾರು ಜನ ಒಟ್ಟಿಗೆ ಸೇರಿ, ಧ್ವಜಾರೋಹಣ ಮಾಡಿ, ರಾಷ್ಟ್ರಗೀತೆ ಹಾಡಿ, ಒಂದು ಗಂಟೆ ಕಾಲ ಪಟಾಕಿಸಿಡಿಸಿ ಸಂಭ್ರಮಿಸುತ್ತಾರೆ. ಕಾರ್ಯಕ್ರಮಕ್ಕೆ ಗಂಟೆಗಟ್ಟಲೆ ಮೊದಲು ಈ ಜನ ಹಸಿರು ಹುಲ್ಲುಹಾಸಿನ ಮೇಲೆ ಜಮಖಾನ ಹಾಸಿ ವಯಸ್ಸಾದವರಿಗೆ ಖುರ್ಚಿ ಹಾಕಿ ಕುರುಕುಲು ತಿಂಡಿ ಕುರುಕುತ್ತಾ, ಮಲಗಿ, ಕೂತು ಸಮಾರಂಭದ ಪ್ರಾರಂಭಕ್ಕಾಗಿ ಕಾಯುತ್ತಿರುತ್ತಾರೆ. ಈ ವರ್ಷ ಒರೆಗಾನ್ ಪ್ರಾಂತದ ಪೋರ್ಟ್‌ಲ್ಯಾಂಡ್‌ನಲ್ಲಿನ ಇಂಥ ಒಂದು ಸಮಾರಂಭದಲ್ಲಿ ನಾನೂ ನನ್ನ ಪರಿವಾರದೊಂದಿಗೆ ಭಾಗವಹಿಸಿದ್ದೆ. ಆಕಾಶದಲ್ಲಿ ಪಟಾಕಿ ಸಿಡಿದು ರಂಗುರಂಗಿನ ಹೂಗಳು ಉದುರಿದಾಗ ಈ ಜನರ ಚೀರಾಟ, ಕೂಗಾಟ ಖುಷಿಯನ್ನು ಕಾಣುವುದೇ ಮನಸ್ಸಿಗೆ ಆನಂದ ಹಾಗೂ ದುಃಖ. ದುಃಖ ನಮ್ಮಲ್ಲಿ ಈ ರೀತಿ ಸಂಭ್ರಮ ಕಾಣಸಿಗುವುದಿಲ್ಲವಲ್ಲ ಎಂಬುವುದಕ್ಕಾಗಿ.

ಜಗತ್ತಿನಲ್ಲಿ ಭಾರತ, ಅಮೆರಿಕಾಗಳೇ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಗಳು. ಸ್ವಾತಂತ್ರ್ಯ ದಿನಾಚರಣೆಯಂದು ನಮ್ಮಲ್ಲಿ ಕಾಣಸಿಗದ ಸಂಭ್ರಮ ಇಲ್ಲೇಕೆ ಕಾಣುತ್ತದೆ? ಉತ್ತರ ಬಹುಸರಳ – ಇಲ್ಲಿನ ಶಿಕ್ಷಣ ಕ್ರಮ.

ಎಲ್‌ಕೆಜಿ, ಯುಕೆಜಿ ತರಗತಿಗಳಲ್ಲೇ ಇಲ್ಲಿ ಮಕ್ಕಳಿಗೆ ತಮ್ಮ ದೇಶದ ಹಿರಿಮೆ ಗರಿಮೆಯ ಬಗ್ಗೆ, ಮಹಾನ್ ದೇಶಭಕ್ತರ ಬಗ್ಗೆ ತಿಳಿಸುತ್ತಾರೆ. ನನ್ನ ಮೊಮ್ಮಗಳು ರಿಷಿಕಾ ಕಳೆದ ವರ್ಷ ಎಲ್‌ಕೆಜಿ ತರಗತಿಯಲ್ಲಿ ಓದುತ್ತಿದ್ದಾಗ ಕೇಳಿದ ಒಂದು ಪ್ರಶ್ನೆ! "ತಾತ, ನಿನಗೆ ಪೆನ್ನಿ ಮೇಲಿರುವ ಚಿತ್ರ ಯಾರದ್ದೆಂದು ತಿಳಿದಿದೆಯಾ? (ಪೆನ್ನಿ ಎಂದರೆ ಅಮೆರಿಕೆಯ ಅತಿ ಚಿಕ್ಕ ನಾಣ್ಯ) ಎಂದಾಗ, ನಾನು 'ಇಲ್ಲ' ಎಂದೆ. ಆಗ ಅವಳು **"It is Abraham Lincoln. He was the president of America. He was very good and removed slavery, he is no more"** ಎಂದು ತಾನು ಕಲಿತ ಭಾಷೆಯಲ್ಲಿ ಉತ್ತರಿಸಿದಳು. ನನಗೆ ಆಶ್ಚರ್ಯವಾಯ್ತು.

ಈ ವರ್ಷ ಜುಲೈ ಮೂರರಂದು ಸಂಜೆ ಶಾಲೆಯಿಂದ ಬಂದವಳೇ, "ತಾತ **you know, tomorrow is our Independence day. Long back George Washington fought English people and got us Independence. Abraham Lincoln was also a president. Now Barack Obama is the president. So for There is no women president. Even I can become a president.**" ಎಂದು ಪಟಪಟನೆ ಹೇಳಿದಾಗ ನಾನು ಮೂಕವಿಸ್ಮಿತನಾದೆ. "ನಿನಗೆ ಹೇಗಮ್ಮ ತಿಳಿಯಿತು" ಎಂದು ಕೇಳಿದಾಗ, "ಸ್ಕೂಲ್‌ನಲ್ಲಿ ಮಿಸ್ಟರ್ ಲೋರೆನ್ ಆ ಪಾಠ ಓದಿ ಹೇಳುವಾಗ ಈ ವಿಷಯ ತಿಳಿಸಿದರು" ಎಂದು ಹೇಳಿದಳು.

ಅವಳ ಮಾತು ಕೇಳಿ ಈ ಹಿಂದೆ ಓದಿದ್ದ ಘಟನೆಯೊಂದು ನೆನಪಿಗೆ ಬಂತು. ನಮ್ಮ ದೇಶದ ಕೆಲವು ಕುಲಪತಿಗಳು, ಅಮೆರಿಕೆಯ ಶಿಕ್ಷಣ ಪದ್ಧತಿ ಅರಿಯಲು ಇಲ್ಲಿನ ಹಲವು ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿ, ಭಾರತಕ್ಕೆ ಹಿಂತಿರುಗುವ ಮುನ್ನ ಅಮೆರಿಕೆಯ ಅಧ್ಯಕ್ಷರನ್ನು ಭೇಟಿ ಮಾಡಿದರು. ಮಾತಿನ ನಡುವೆ ಇಲ್ಲಿನ ಶಿಕ್ಷಣದ ವಿಶೇಷತೆಯ ಬಗ್ಗೆ ಅಧ್ಯಕ್ಷರನ್ನು ಪ್ರಶ್ನಿಸಿದಾಗ, ಅವರು ಕೊಟ್ಟ ಉತ್ತರ ಮಾರ್ಮಿಕ **"In our country every teacher looks upon every child in the school as the future president of America"**

ನಮ್ಮಲ್ಲಿನ ಶಿಕ್ಷಣಪದ್ಧತಿಯಲ್ಲಿ ಇಂಥ ವಿಚಾರ ಬರುವುದೆಂದು ? ನಮ್ಮ ಅಧ್ಯಾಪಕರಲ್ಲಿ, ಶಿಕ್ಷಣ ಆಡಳಿತಗಾರರಲ್ಲಿ ಈ ಭಾವ ಮೂಡುವುದೆಂದು ?

ಎಚ್. ನಾಗಭೂಷಣರಾವ್
ಪೋಷಕರು, ಕರ್ನಾಟಕ ರಾಜ್ಯ
ಮಾಧ್ಯಮಿಕ ಶಿಕ್ಷಕ ಸಂಘ (ರಿ.)



# ಪ್ರತಿಭಾ ಪುರಸ್ಕಾರ ಸಮಾರಂಭ
# ಬೆಂಗಳೂರು ದಕ್ಷಿಣ ಜಿಲ್ಲೆ



ಬೆಂಗಳೂರು ದಕ್ಷಿಣ ಜಿಲ್ಲೆಯ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ
ಶ್ರೀ ಅನಂತ್ ಕುಮಾರ್‌ರವರು ಮಾತನಾಡುತ್ತಿರುವುದು



ಗಣ್ಯರೊಂದಿಗೆ ಪುರಸ್ಕೃತ ವಿದ್ಯಾರ್ಥಿಗಳು



ಗಣ್ಯರಿಂದ 'ಸ್ವಾಮಿ ವಿವೇಕಾನಂದ : ಸ್ವಾತಂತ್ರ್ಯ ಸಂಗ್ರಾಮದ ಪ್ರೇರಣಾ ಸ್ರೋತ' ಪುಸ್ತಕ ಬಿಡುಗಡೆ


**SEPTEMBER 2014**
Date of Posting
20th or 21st of every month

Registered No. RMP 45459/85
RMP/KA/BGS-125/2012-14
Posted at Bangalore GPO
Bangalore - 560 001


## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (T.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ ''ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ'' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER


Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.



srushtidesigns@gmail.com